ಅಪರಂಜಿ

ಜನವರಿ
1996
ತಿಳಿನಗೆಯ ಕಾರಂಜಿ



* ಪ್ರಕಾಶ್
* ಸಾಗೂಶ್ರೀ ಸೂರಿ
* ಪ್ರೊ. ನಿಸಾರ್ ಅಹಮದ್
* ಮುಮ್ತಾಜ್ ಬೊಳುವಾರು
* ಡಾ|| ಶರಣ ಬಸವೇಶ್ವರ ಅಂಗಡಿ
* ಶಿವು
* ರಾ. ಶಿ.
* ಕೊ. ಪು. ಶಿವಪ್ರಸಾದ್
* ಮಗು. ಬಿರಾದಾರ
* ಜಿ. ವಿ, ಅರುಣ
* ಕುಮುದಾ ಪುರುಷೋತ್ತಮ್
* ಅರುಣಾ ಕಾರಂತ
* ಬುಳ್ಳ

ಬಿಡಿ ಪ್ರತಿ: 2 ರೂ. 50 ಪೈ.

ಗೌರವ ಸಲಹೆಗಾರರು:	ಚಂದಾ ವಿವರ:
ಶ್ರೀ ಅ. ರಾ. ಸೇ.	ಬಿಡಿ ಪ್ರತಿ: ರೂ. 2.50
ಶ್ರೀ ಶೇಷಗಿರಿ	ವಾರ್ಷಿಕ ಚಂದಾ: ರೂ. 25
ಸಂಪಾದಕ:	
ಶಿವಕುಮಾರ್	ಆಜೀವ ಚಂದಾ : ರೂ. 250

ವಿಳಾಸ : ಅಪರಂಜಿ ಕಾರ್ಯಾಲಯ, 36, 6ನೇ ಮುಖ್ಯ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560 003 (ಕೆಲಸದ ವೇಳೆ: ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ)



ಈ ಸಂಚಿಕೆಯಲ್ಲಿ

ಮುದ್ರಣ: ಇಂಪ್ರೆಶನ್ಸ್, ಬೆಂಗಳೂರು - 3 ಅಕ್ಷರ ಜೋಡಣೆ: ಒಮೇಗಾ ಲೇಸರ್ ಟೆಕ್, ಬೆಂಗಳೂರು 27



ಅಪರಂಜಿ

(ತಿಳಿನಗೆಯ ಕಾರಂಜಿ)


ಸಂಪುಟ 13 ಜನವರಿ 96 ಸಂಚಿಕೆ-4

ಎಲ್ಲಾ ಭೂತಗಳೂ ಇಲ್ಲಿ ಜ್ಞಾನಿಗೆ ಆತ್ಮವಾಯಿತೋ ಏಕತ್ವವನ್ನೇ ಅಲ್ಲಿ ಸದಾ ನೋಡುವವನಿಗೆ ಮೋಹವೆಲ್ಲಿ? ಶೋಕವೆಲ್ಲಿ? - ಈಶಾವಾಸ್ಯ

ಎಲ್ಲ ಪ್ರಾಣಿಗಳ ಆತ್ಮನೂ ತನ್ನ ಆತ್ಮನೇ ಎಂಬರಿವು ಸದಾ ಇರುತ್ತದೆಯಾದುದರಿಂದ ಆತ್ಮಜ್ಞಾನಿಗೆ ಮೋಹ ಶೋಕಗಳಿಲ್ಲ ಎನ್ನುವುದು ಉಪನಿಷತ್ತಿನ ಅಭಿಪ್ರಾಯ.

ಆದರೆ ಅಜ್ಞಾನಿಗಳಾದ ನಮಗೂ ಅಷ್ಟೇ. ದೊಂಬಿ, ಗಲಭೆ, ಪ್ರದರ್ಶನ, ಕಲ್ಲೇಟು, ತನಿಖೆ, ಆಯೋಗ, ರಾಜೀನಾಮೆಗೆ ಒತ್ತಾಯ, ಪವರ್‌ಕಟ್, ನೀರುಕಟ್, ಮುಷ್ಕರ, ಅಭಾವ ಎಂಬ ಭೂತಗಳು. ನಮಗೂ ಎಲ್ಲ ಜೀವಿಗಳಿಗೂ ಸಮಾನ. ಈ ಭೂತ ಭಯಕ್ಕೆ ಕಾರಣವಾದ ಭೂತಗಳಿಗೂ, ತಾವು ಸೃಷ್ಟಿಸಿದ ಈ ಭೂತ ಅವನನ್ನು ನುಂಗುವುದೋ ತಮ್ಮನ್ನೇ ನುಂಗಿ ನೀರುಕುಡಿಯುವುದೋ ಎಂಬ ಭಯ.

ಈ ಎಲ್ಲ ಭೂತಗಳಲ್ಲಿ ಹಣ ಅಧಿಕಾರ ಬಲಗಳ ಆಶೆಯೊಂದೇ ಇದೆ ಎಂಬುದನ್ನು ನೋಡುತ್ತಿರುವ ಜ್ಞಾನಿಗೆ ಮೋಹವೂ, ಶೋಕವೂ ಕಾಡುವುದಿಲ್ಲ, ಮತದಾನಕ್ಕೆ ಮತವೇ ಬುನಾದಿಯಾಗುವುದಿಲ್ಲ. ಆದುದರಿಂದಲೇ ಅಪರಂಜಿ, ಧೃತಿಗೆಡುವುದಿಲ್ಲ, ''ರಾಮನಿಗೆ ರಾಜ್ಯ ಬಂದರೂ, ಪವರ್‌ಕಟ್ ಕಾಲದಲ್ಲಿ ರಾಗಿ ಬೀಸಲೇಬೇಕು.''





O ಪ್ರಕಾಶ್

ಶಾಸಕರಿಗೆ ಆಹ್ವಾನವಿಲ್ಲದ್ದಕ್ಕೆ ಕುರ್ಚಿ ಎಸೆತ, ಧರಣಿ

- ಸುದ್ದಿ

ಅದೇ ಕುರ್ಚಿಗಳ ಮೇಲೆ ಕೂರಬಹುದಿತ್ತು!!

★ ★ ★

ಸಚಿವರ ಮನೆ ಮುಂದೆ ತಮಟೆ ಚಳುವಳಿ

- ಪತ್ರಿಕೆ

ಚಳುವಳಿಯಲ್ಲಿ ಕಿಂದರಿಗಳು ಖಂಡಿತ ಇರಲಿಲ್ಲವಂತೆ !!

★ ★ ★

ಅನವಶ್ಯಕ ಕೋಲಾಹಲದ ಸುದ್ದಿ ಕೇಳಿ ಬಾಬಾಸಾಹೇಬ್ ಕಣ್ಣೀರು ಸುರಿಸಿದರಂತೆ!

★ ★ ★

ಕಾಂಗ್ರೆ ಬಲಪಡಿಸಲು ಪೂಜಾರಿ ಕರೆ

- ಸುದ್ದಿ

ದೇವರು ವರ ಕೊಡಬೇಕು, ಅಷ್ಟೆ!!

★ ★ ★

ಉಗ್ರಗಾಮಿಗಳ ಮೀನುಗಾರರ ಅಪಹರಣ

- ಪತ್ರಿಕೆ

ಇದರಲ್ಲೇನೋ Fishy ಆಗಿರುವಂತಿದೆ!!

★ ★ ★

ಹರ್ಷದ್ ಮೆಹ್ತ ತೆರಿಗೆ ಬಾಕಿ 3647 ಕೋಟಿ ರೂಪಾಯಿ

- ಸುದ್ದಿ

ಇದನ್ನೂ ಗಿನ್ನಿಸ್ ಬುಕ್ಕಿನಲ್ಲಿ ಸೇರಿಸಬಹುದು!

★ ★ ★

ಹಗರಣ ಮುಕ್ತ ಸರ್ಕಾರ; ವರ್ಷದ ಸಾಧನೆ

- ಶೀರ್ಷಿಕೆ

ಇದು ಶೀರ್ಷಿಕೆಯಾಗುವ ದುಃಸ್ಥಿತಿ ದೇಶಕ್ಕೆ ಬಂತಲ್ಲ ಅಂತ ಅಪರಂಜಿ ಹುಬ್ಬೇರಿಸಿದಳಂತೆ!

★ ★ ★

ರಣಜಿ ಕ್ರಿಕೆಟ್; ಜೀವ ತುಂಬಿದ ಕುಂಬ್ಳೆ, ವೈದ್ಯ

- ಕ್ರೀಡಾ ಸುದ್ದಿ

ಆಹಾ! ಶೀರ್ಷಿಕೆ ಅಂದರೆ ಹೀಗಿರಬೇಕು!!

★ ★ ★

ವಿಮರ್ಶಕಿ

○ ಚಂಚಲಾ ವೇಣು

ಗಂಡನ

ಬಿಡಿ ಬರಹಗಳನ್ನೋದಿದ

ಮಡದಿ

ನುಡಿದಳು

ಬಿಡಿ

ಬರಹ!

ನಮ್ಮ ನಿಮ್ಮಲ್ಲಿ

ಅಪರಂಜಿಯಲ್ಲಿ ವ್ಯಂಗ್ಯ ಚಿತ್ರಗಳು ಬಹು ವಿರಳ, ಚಿತ್ರಗಳನ್ನು ನೋಡಬೇಕಾದರೆ ಯುಗಾದಿ ಸಂಚಿಕೆಗೇ ಕಾಯಬೇಕು ಎಂಬ ದೂರು ಮೊದಲಿನಿಂದ ಇತ್ತು. ಈ ಕೊರತೆಯನ್ನು ಪರಿಹರಿಸಲು ಈಗ ಸಮಯ ಕೂಡಿ ಬಂದಿದೆ. ಜನವರಿ '96 ರ ಸಂಚಿಕೆಯಿಂದ ಸಂಚಿಕೆಯ ಮುದ್ರಣವನ್ನು ಡಿ.ಟಿ.ಪಿಯಲ್ಲಿ ಮಾಡಲು ನಿರ್ಧರಿಸಿದ್ದೇವೆ. ಈ ತೆರನಾದ ಮುದ್ರಣ ಸಹಜವಾಗಿ ದುಬಾರಿ. ಓದುಗರ ಉತ್ಸಾಹ, ಪ್ರೋತ್ಸಾಹದಿಂದ, ಸಂಚಿಕೆಯ ಪ್ರಸಾರ ದ್ವಿಗುಣವಾದರೆ ಮಾತ್ರ ಈ ಹೆಚ್ಚಿನ ವೆಚ್ಚವನ್ನು ಭರಿಸಬಹುದು. ಹೊಸ ಚಂದಾದಾರರಿಗೆ ಅಪರಂಜಿಯನ್ನು ಪರಿಚಯಿಸಿ, ಸಹಾಯ ನೀಡಿರೆಂದು, ಓದುಗ ಬಾಂಧವರಲ್ಲಿ ಕಳಕಳಿಯ ಮನವಿ.

ಕಳೆದವಾರ ಮಣಿಪಾಲದಲ್ಲಿದ್ದಾಗ ಬೊಳುವಾರು ಮತ್ತು ಅವರ ಮನೆಯವರನ್ನೆಲ್ಲಾ ಭೇಟಿಮಾಡುವ ಅವಕಾಶ ಒದಗಿತ್ತು. ಬೊಳುವಾರುರವರ ಗದ್ಯವೇ ಕಾವ್ಯದಂತಿರುತ್ತದೆ. 'ಉರಿದು ಬೂದಿಯಾದವರು, ಒಣಗಿ ಪುಡಿಯಾದವರು, ಸೀದು ಕರಕಲಾದವರು, ಕರಗಿ ದ್ರವವಾದವರು, ಎಲ್ಲರೂ ಮತ್ತೊಮ್ಮೆ ಎದ್ದು ಬಂದಿದ್ದರು' ಎಂಬ ಸಾಲುಗಳಲ್ಲಿ ಕವನದ ಧಾಟಿಯಿದೆ. ಅವರ 'ಆಕಾಶಕ್ಕೆ ನೀಲಿ ಪರದೆ' ಒಂದು ರೀತಿಯಲ್ಲಿ ಕಣ್ಣು ತೆರೆಸುವ ಪುಸ್ತಕ. ಅವರ ಮನೆಯಲ್ಲಿದ್ದಾಗ ಅವರ ಮಗಳು ಮಮತಾಜ್ ಕೊಟ್ಟ ಒಂದು ಕವನವನ್ನು ಈ ಸಂಚಿಕೆಯಲ್ಲಿ ಪ್ರಕಟಿಸಿದ್ದೇವೆ. ಹೊಸ ಲೇಖಕಿ ಮಮತಾಜ್‌ಗೆ ಅಪರಂಜಿ ಬಳಗದ ಆದರದ ಸ್ವಾಗತ.

ಮೊನ್ನೆ ಬೇಂದ್ರೆ ಗೀತ ಯಾತ್ರೆಯ ಸಮಾರಂಭದಲ್ಲಿ ಖ್ಯಾತ ಕವಿ ನಿಸಾರ್ ಅಹಮದ್‌ರವರನ್ನು ಭೇಟಿಮಾಡಿದ್ದೆ. ಅಲ್ಲಿ ಅವರು ಮಾತನಾಡುತ್ತಾ ''ಹಿಂದೊಮ್ಮೆ ಬೇಂದ್ರೆಯವರ ಮುಂದೆ ನನ್ನ ಕವನಗಳನ್ನು ಓದಿದ್ದೆ, ಓದಿದ ನಂತರ ಅವರು ನನ್ನ ಬೆನ್ನು ತಟ್ಟಿ, ''ನಿನ್ನ ಹೆಸರು ನಿಸ್ಸಾರ ಇದ್ದರೂ, ಕವನ ನಿಸ್ಸಾರ ಇಲ್ಲ. ಸಾರ ಅದS.'' ಅಂತ ಹೇಳಿದ್ದರು. ಮುಂದುವರೆದು ''ಆದರS, ಅಹಂ, ಮದ ಇವೆರಡೂ ನಿನ್ನಲ್ಲಿ ನಿಸ್ಸಾರ ಆಗೇದS'' ಅಂತ ಕೂಡ ಸೇರಿಸಿದ್ದರು'' ಎಂದೆಲ್ಲಾ ತಮ್ಮ ಅನುಭವಗಳನ್ನು ಅಂದು ವಿವರಿಸಿದರು. ನಿಸಾರ್‌ರವರು ಅಪರಂಜಿಯ ಅಭಿಮಾನಿ ಹಾಗೂ ಹಿತೈಷಿ. ಕೊರವಂಜಿಯ ತಲೆಮಾರಿನ ಲೇಖಕರ ಒಂದೆರಡು ಲೇಖನಗಳನ್ನು ಹೊಸ ಪೀಳಿಗೆಯ ಅಪರಂಜಿ ಓದುಗರಿಗೆ ಪರಿಚಯಿಸುವ ಯತ್ನಮಾಡಿ ಎಂಬ ಸಲಹೆ ಅಂದು ನಿಸಾರ್ ನೀಡಿದರು. ಬುಳ್ಳರ ಕವನ ಈ ನಿಟ್ಟಿನಲ್ಲಿ ಮೊದಲ ಕೊಡುಗೆ.


ಈ ಎಲ್ಲ ಬದಲಾವಣೆಗಳ ಬಗ್ಗೆ ನಿಮ್ಮ ಮುಕ್ತ ಅಭಿಪ್ರಾಯಗಳನ್ನು ತಿಳಿಸಿ. ನಾವೆಲ್ಲಾ ಸೇರಿ ಒಂದು ಹೊಸ ನಗೆ ಸಂಸ್ಕೃತಿಗೆ ಜೀವ ತುಂಬೋಣ.

ನಗೆ ಗನ್ನಡಂ ಗೆಲ್ಗೆ

-ಸಂಪಾದಕ.

ಜಂಬಲ್ಸ್

ನಾಗೂಶ್ರೀ ಸೂರಿ



ಗು ದು ಸಿ ಲು ಬಿ ರೆ

☐ ☐ ☐ ☐ ☐ ☐

ಗುಂ ಕು ಹಾ ಡು ವು ದು

☐ ☐ ☐ ☐ ☐ ☐

ರೈ ಪು ಗ ಳಿ ಯೋ

☐ ☐ ☐ ☐ ☐

ಅವರು ಭಾಷಣದ ಪೂರ್ತಿ ಬರೀ ☐☐ ☐☐☐☐ ಮಾಡುತ್ತಿದ್ದರು

(ಸರಿಯುತ್ತರಕ್ಕೆ 39ನೇ ಪುಟ ನೋಡಿ)

ಪರೀಕ್ಷಾಮಂದಿರದಲ್ಲಿ

○ ಪ್ರೊ॥ ಕೆ. ಎಸ್. ನಿಸಾರ್ ಅಹಮದ್

ಆಕಳಿಸುತ್ತಾ ಕೂರುವ ಬದಲು
ಏನನ್ನಾದರೂ ಗೀಚು;
ನಿಮಿಷಕೊಂದು ಸಲ ನೋಡುವೆ ಯಾಕೆ?
ಕೆಟ್ಟಿಲ್ಲ ಹೊಸ ವಾಚು!

2

ಜೇಬಿಗೆ ಕೈಯನು ಬಿಟ್ಟವ, ನನ್ನನು
ಕಂಡರೆ ತೆಗೆಯುವೆ ಕರ್ಚೀಫು;
ಈ ಚಳಿಯಲ್ಲೂ ಬೆವರೇ ನಿನಗೆ?
- ಕಾಗದದಂತೆ ಹಣೆ ಸಾಪು.

3

ತಲೆ ಕೆರೆಯುತ್ತ ನೋಡುವೆ ತಾರಸಿ,
ದೇವರೆ ಉತ್ತರ ಇಳಿವುದಕೆ?
ನೆಲವನು ಕೆರೆಯುವೆ ಕಾಲಿಂದ;
ಉದ್ಭವ ಮೂರ್ತಿಯೆ ಹೊಮ್ಮಲಿಕೆ?

4

ಕುಡಿಯುವೆ ಯಾಕೆ ನೀರನ್ನಷ್ಟು?
ಮೊದಲೇ ಸಣಕಲ ನೀನು.
ದೈನ್ಯದೊಳೇತಕೆ ನೋಡುವೆ ನನ್ನನು?
ಸದ್ಯಕೆ ಗೊಡ್ಡೀ ಸುರಧೇನು!

5

ಅಮೂರ್ತ ಚಿತ್ರವ ಕೊರೆವುದ ನಿಲ್ಲಿಸು,
ಮಾರ್ಕ್ಸುಗಳಿಲ್ಲ ಅದಕ್ಕೆ,
ಪುಟಗಟ್ಟಲೆ ಬರಿ ಪ್ರಶ್ನೆಯನೇ ಬರಿ;
ಬರುವುದು ಬರಹ ಹದಕ್ಕೆ!

('ನಿಸಾರರ 'ಸಮಗ್ರಕವಿತೆಗಳು' ಗ್ರಂಥದಿಂದ ಆಯ್ಕೆ ಮಾಡಿದ್ದು.)

ಕುಪ್ಪಣ್ಣ

(ರಾ.ಶಿ. ಯವರ 'ತುಟಿ ಮೀರಿದುದು' ಸಂಕಲನದಿಂದ)

''ಕುಪ್ಪಣ್ಣನ ವಿಚಾರ ಕಟ್ಟಿಕೊಂಡು ನಮಗೇನಪ್ಪಾ; ಅವನು ಯಾರಾದರೆ ನಮಗೇನು?'' ಎನ್ನಿಸಬಹುದು ನಿಮಗೆ. ಆದರೆ ಅವನ ವಿಚಾರ ಸ್ವಲ್ಪ ಓದಿ ನೋಡಿ; ಅದರಿಂದಾಗುವ ಪ್ರಯೋಜನವು ನಿಮಗೆ ತಿಳಿಯುವುದು. ನಿಮ್ಮ ಸ್ನೇಹಿತರ ಮಂಡಳಿಯಲ್ಲಿ, ಪರಿಚಯಸ್ಥರಲ್ಲಿ ಒಬ್ಬೊಬ್ಬ ಕುಪ್ಪಣ್ಣ ಇದ್ದೇ ಇರುವನು. ಹಾಗೆ ನಿಮ್ಮ ಅರಿವಿಗೆ ಯಾರೂ ಸಿಗದಿದ್ದರೆ ಕನ್ನಡಿಯಲ್ಲಿ ನಿಮ್ಮ ಮುಖವನ್ನು ಒಮ್ಮೆ ನೋಡಿಕೊಳ್ಳಿ, ನೀವೇ ಕುಪ್ಪಣ್ಣ ಆಗಿರಬಹುದು. ನಿಮ್ಮ ಸ್ನೇಹಿತ ಕುಪ್ಪಣ್ಣನು ಯಾವಾಗಲಾದರೂ ನಿಮ್ಮ ಮನಸ್ಸನ್ನು ಬೇಸರ ಮಾಡಬಹುದು. ಆಗ ನಮ್ಮ ಕುಪ್ಪಣ್ಣನನ್ನು ಜ್ಞಾಪಕಕ್ಕೆ ತಂದುಕೊಂಡು ಶಾಂತರಾಗಿ, ಅವನ ಮನಸ್ಸನ್ನು ನೋಯಿಸದೆ ಇರಬಹುದು.

ಕುಪ್ಪಣ್ಣ ಹತ್ತು ಹದಿನಾರು ವರ್ಷದ ಪ್ರಾಯ ತುಳುಕುತ್ತಿರುವ ನವ ಯುವಕ. ಸುಮಾರು ಆರೇಳು ಅಡಿ ಎತ್ತರ. ಇದೇನಿದು? ಒಂದು ಅಡಿ ಎತ್ತರ ಹೆಚ್ಚು ಕಡಿಮೆ ಆಗಬಹುದೇ, ಎನ್ನಬೇಡಿ. ತಲೆ ತಗ್ಗಿಸಿ ವಿನಯದಿಂದ ನಡೆಯುವಾಗ ಅವನು ಆರಡಿ ಎತ್ತರ. ಸ್ವಲ್ಪ ಜಂಭ ಬಂದಾಗ ಸಾಹಸಿಕ ಕಾರ್ಯಮಾಡಿದ್ದೇನೆಂದು ತಿಳಿದಾಗ ಏಳಡಿ ಎತ್ತರ ಆಗುತ್ತಿದ್ದ. ಬಣ್ಣ ಮಾಸಲು ಕಪ್ಪು. ಆದುದರಿಂದಲೇ ಅದೆಂದಿಗೂ ವಿವರ್ಣವಾಗುತ್ತಿದ್ದಿಲ್ಲ. ಕಣ್ಣು ಮುಕ್ಕಾಲು ಕುರುಡು. ಕುರುಡನ್ನು ಹೋಗಲಾಡಿಸಲು ಸೋಡಾವಾಟರ್ ಬಾಟಲಿನ ತಳವನ್ನು ದುಂಡಗೆ ಕತ್ತರಿಸಿ, ಅವನ್ನು ಬೆಳ್ಳಿಯ ಸುಲೋಚನದ ಕಟ್ಟಡದಲ್ಲಿ ಕಟ್ಟಿಸಿ ಧರಿಸುತ್ತಿದ್ದ. ತಲೆಯನ್ನು ಕ್ರಾಪು ಮಾಡಿಸಿದ್ದ. ಅವನು ಬಹು ವೈದಿಕ ಸಂಪ್ರದಾಯಸ್ಥರ ಮನೆಯಲ್ಲಿ ಹುಟ್ಟಿದವನು. ಅವನು ಕ್ರಾಪು ಮಾಡಿಸಿದ್ದುದು ಬಲು ಆಶ್ಚರ್ಯಕರವಾದ ಸಂಗತಿ. ಅದಕ್ಕೆ ಬಲವತ್ತರವಾದ ಕಾರಣವೊಂದಿತ್ತು. ಒಂದು ದಿನ ಮನೆಯಲ್ಲಿ ಅವನು ಜೇನುತುಪ್ಪವನ್ನು ಕದಿಯುತ್ತಿದ್ದಾಗ ಅವರ ಅಜ್ಜಿಯು ಬರಲು ಕದಿಯುತ್ತಿದ್ದ ಕೈಯನ್ನು ಹಾಗೆಯೇ ತಲೆಗೆ ಒರಸಿಕೊಂಡನಂತೆ. ಅಂದಿನಿಂದ ಅವನಿಗೆ ನರೆಗೂದಲಾಯ್ತಂತೆ ನರೆಗೂದಲು ಕೂಡ ಪಟ್ಟೆ ಪಟ್ಟೆಯಾಗಿ ಆಗಿತ್ತಂತೆ. ಅಂಥಹ ಕೂದಲನ್ನು ಯಥೇಚ್ಛವಾಗಿ ಬೆಳೆಸಿ ಗಂಟು ಹಾಕಿಕೊಳ್ಳುವುದು ಅಂದವಲ್ಲವೆಂದು ತಿಳಿದು ತಂದೆ ತಾಯಿಗಳ ಕ್ರೋಧವನ್ನೂ ಲಕ್ಷಿಸದೆ ಕ್ರಾಪು ಮಾಡಿಸಿಬಿಟ್ಟಿದ್ದ. ಮೂಗು ಸ್ವಲ್ಪ ಮುಂದು. ಅರ್ಧ ಬಾಯನ್ನು ಮುಚ್ಚಿಕೊಂಡುಬಿಟ್ಟಿತ್ತು. ಬಾಯಿ ಅಷ್ಟೇನೂ ದೊಡ್ಡದಲ್ಲ. ಆ ಕಾರಣದಿಂದಲೇ ಮೂಗು ಅದನ್ನು ಮರೆಸಲು ಅನುಕೂಲವಾಗಿತ್ತು.

ಆ ಚಿಕ್ಕ ಅಂಗಗಳ ಗಲಾಟೆಯಲ್ಲಿ ಕಿವಿಯ ಪಾಡೇ ಇಲ್ಲ. ಆ ಜತೆ ಕಿವಿಗಳು ತಲೆಯ ಹಿಂಭಾಗದಲ್ಲಿ ಎಲ್ಲೋ ಟೋಪಿಯನ್ನು ಹೊತ್ತುಕೊಳ್ಳಲು ಮತ್ತು ಸುಲೋಚನದ ಸುರುಳಿಯನ್ನು ಸುತ್ತುಕೊಳ್ಳಲು ಸಿದ್ಧವಾಗಿರುತ್ತಿತ್ತು.

ಮನುಷ್ಯನಿಗೆ ಮುಖ್ಯ ಇರುವುದು ಅಥವಾ ಇಲ್ಲದಿರುವುದು ಮುಖ. ಅದಾದ ಮೇಲೆ ಕೈಕಾಲುಗಳು ಹೇಗಿದ್ದರೂ ಪರವಾಗಿಲ್ಲ. ಕುಪ್ಪಣ್ಣನ ಕೈಗಳು ಕಾಲನ್ನು ಮುಟ್ಟುತ್ತಿದ್ದುವು. ಕಾಲು ಸಮುದ್ರದ ಆಳವನ್ನು ನೋಡಲು ಸಹಕಾರಿಯಾಗಿರುತ್ತಿದ್ದವು. ಮೈ ಇವೆರಡರಷ್ಟುಗಾತ್ರವಾಗಿತ್ತು. ದೇವರು ಇನ್ನೆರಡು ಕೈ ಕಾಲು ಕೊಟ್ಟಿದ್ದರೆ ಇವನು ಮನೆ ಮೂಲೆಯಲ್ಲಿ ಹೋಗಿ ಒಂದು ಪರೆಯನ್ನು ಕಟ್ಟಿಕೊಂಡು ಹಾರಾಡುವ ಜೀವಜಂತುಗಳನ್ನು ಹಿಡಿದು ಜೀವಿಸುತ್ತಿದ್ದನೊ, ಏನೊ, ಎನ್ನಿಸುತ್ತಿತ್ತು.

ಇದೆಲ್ಲಾ ಓದಿದ ಮೇಲೆ ನಿಮಗೆ - ಈ ಬರೆದ ಮಹಾರಾಯ ಏಕೆ ಇಷ್ಟು ಕಷ್ಟಪಟ್ಟುಕೊಂಡು ಬರೆದನೊ? ಸುಮ್ಮನೆ ಒಂದು ಬೊಂಬೆಯನ್ನು ಬರೆಯಬಾರದಿತ್ತೇ- ಎನ್ನಿಸಬಹುದು. ನನಗೆ ಬೊಂಬೆ ಬರೆಯಲು ಬರುವುದಿಲ್ಲ. ಒಂದೆರಡು ಸಾರಿ ಬರೆದ ಬೊಂಬೆಗಳು ಫಾಲ್ಗುಣ ಶುದ್ಧ ಪೌರ್ಣಮಿಯ ದಿನಕ್ಕೆ ಪ್ರಯೋಜನಕಾರಿಯಾದುವು. ಆ ಭಯದಿಂದ ಚಿತ್ರಿಸಲಿಲ್ಲ. ಅಲ್ಲದೆ ಬರೆಯುವ ಹುಚ್ಚನ್ನು ಹೇಗೆ ಬಿಡಿಸಿಕೊಳ್ಳುವುದು? ನೀವು ಬೈದು, ಹಾಸ್ಯ ಮಾಡಿ ನಿಲ್ಲಿಸಪ್ಪಾ ಎಂದರಲ್ಲವೇ?

ಈ ಕುಪ್ಪಣ್ಣನ ಬೊಂಬೆ ನೀವು ಓದಿದ್ದಾಯಿತು. ಇವನ ಗುಣವನ್ನು ಇನ್ನು ಸ್ವಲ್ಪ ತಿಳಿಯುವುದು ಒಳಿತು. ಅದೇ ರಸವತ್ತಾದ ಜೀವನದ ಮುಖ್ಯಾಂಶ. ಅವನು ಒಳ್ಳೆಯವನು, ಕೆಟ್ಟವನು, ಐಯಂಗಾರಿ, ಅನಾಚಾರಿ ಎಂದರೆ ಅಷ್ಟು ಅರ್ಥವಾಗುವುದಿಲ್ಲ. ಅದಕ್ಕೆ ಬದಲು ಅವನು ನನ್ನೊಡನೆ ಇದ್ದ ಒಂದು ದಿನದ ಜೀವನವನ್ನು ಚಿತ್ರಿಸಿದರೆ ನಿಮಗೆ ಹೆಚ್ಚು ಪ್ರಯೋಜನಕಾರಿಯಾಗುವುದೆಂದು ನನ್ನ ಅಭಿಪ್ರಾಯ.

* * *

ಒಂದು ದಿನ ಬೆಳಿಗ್ಗೆ- ಎಲ್ಲಾ ದಿನಗಳಂತೆಯೇ - ಎಂಟು ಗಂಟೆಯ ವೇಳೆಗೆ ನಾನು ಜನಾಂಗದ ಸೇವೆ ಮತ್ತು ಉದರ ಪೋಷಣೆ ಎರಡೂ ಮಾಡಿಕೊಳ್ಳುವ ಛಾವಡಿಗೆ ಹೋಗುತ್ತಿದ್ದೆ. ದಾರಿಯಲ್ಲಿ ಸಿಕ್ಕಿದ ಕುಪ್ಪಣ್ಣ.

'ಏನಯ್ಯಾ ಕೊರವಂಜಿ, ಎಲ್ಲಿಗೆ ಹೊರಟೆ?'

ನಾನೆಲ್ಲಿಗೆ ಆ ವೇಳೆಯಲ್ಲಿ ಹೋಗುತ್ತೇನೆಂಬುದು ಅವನಿಗೆ ಚೆನ್ನಾಗಿ ಗೊತ್ತು. ಮಾತು ಹೂಡಲು ಅದೊಂದು ಶ್ಲೋಕು.

'ಕೆಲಸಕ್ಕಯ್ಯಾ ರಾಜ.'

ಅವನನ್ನು ನಾನು ಕುಪ್ಪಣ್ಣ ಎಂಬ ಹೆಸರೊಂದಲ್ಲದೆ ಅಮರಕೋಶದ ರೀತಿಯಾಗಿ ಅರಸನ ಹೆಸರುಗಳಿಂದಲೂ ಪ್ರೀತಿಗಾಗಿ ಕರೆಯುತ್ತಿದ್ದೆ.

'ಅಲ್ಲಾ ಕೊರವಂಜಿ, ಮೊನ್ನೆ ಕೇಳಿದೆಯೇನು?'

'ಏನು ದೊರೆ ಅದು?'

'ನೋಡು, ಕನ್ನಂಬಾಡಿ ಕಟ್ಟೆಗೆ ನಮ್ಮನೆ ಮೂರನೆಯ ಮನೆಯಲ್ಲಿ ಇರುವ ರಾಜೈಂಗಾರಿ ಹೋಗಿದ್ದನಂತೆ. ಅಲ್ಲಿ ಒಂದು ಜೀವದಿಂದಿರುವ ಮೊಸಳೆ ನೆಲದ ಮೇಲೆ ಮಲಗಿದ್ದುದನ್ನು ನೋಡಿದನಂತೆ. ಆಮೇಲೆ ಊರಿಗೆ ಬಂದ. ಬರುತ್ತಲೂನೂ ನಮ್ಮನೆಗೆ ಓಡಿ ಬಂದು 'ಕುಪ್ಪಣ್ಣಾ, ನೀನು ಹೇಳಿದ್ದು ದಿಟವಯ್ಯಾ. ಕನ್ನಂಬಾಡೀಲಿ ಮೊಸಳೆ ಇದೆ' ಎಂದು ಒಪ್ಪಿಕೊಂಡ. ನೋಡು, ಮೊದಲು ನಾನು ಹಾಗೆ ಹೇಳಿದಾಗ 'ಅಲ್ಲ' ಎಂದು ಜೋರು ಮಾಡಿದ; ಆಮೇಲೆ ನೋಡು ಸುಸ್ತಾಗಿಬಿಟ್ಟ.'

ಇವನ ಮನೆ ಮೂರನೆ ಮನೆಯಲ್ಲಿರುವ ಗಂಡಸರ ಗೊಡವೆ ನನಗೇಕೆ? ಅವನು ಕನ್ನಂಬಾಡೀಲಿ ಮೊಸಳೆ ಕಂಡರೆ ನನಗೇನು ಸುಖ? ಇವೆಲ್ಲಾ ಕುಪ್ಪಣ್ಣನಿಗೆ ರುಚಿಸಿದ ವಿಷಯ. ಅವನಿಗೆ ಬೇಕಾದುದು ಒಂದೇ. ನನ್ನೊಡನೆ ಏನಾದರೂ ಒಂದು ಮಾತನಾಡಬೇಕು. ಆ ಮಾತು ಅವನ ವಿಚಾರವಾಗಿರಬೇಕು. ಆ ವಿಚಾರದಲ್ಲಿ ಅವನು ಜಯಿಸಿರಬೇಕು. ಅಷ್ಟೇ-ಅದು ನನಗೆ ಪ್ರಕೃತವಾದುದಾಗಿರಲಿ ಸಂಬಂಧವಿಲ್ಲದಿರಲಿ-ಅದು ಅವನಿಗೆ ಬೇಡದ ವಿಷಯ.

'ಸರಿ ನನ್ನೊಡೆಯಾ, ಕೆಲಸಕ್ಕೆ ಹೊತ್ತಾಯಿತು,' ಎಂದು ಹೇಳಿ ಮುಂದಕ್ಕೆ ಹೊರಟೆ.

ಹತ್ತು ಹೆಜ್ಜೆ ಮುಂದೆ ಹೋದೆ. ಹೋಟೇಲು ಹತ್ತಿರ ಬಂತು. ಅಲ್ಲಿ ಕಾಫೀ ಕುಡಿದು ಎರಡಾಣೆ ಕಂದಾಯ ಕಟ್ಟಿ ಮುಂದೆ ಹೋಗುವ ವಾಡಿಕೆ. ಆದರೂ ಸುತ್ತಮುತ್ತಲೂ ನೋಡಿ ಅಪಾಯವಿಲ್ಲವೆಂದು ತಿಳಿದ ಮೇಲೆ ಹೋಟೇಲಿಗೆ ನುಗ್ಗುವ ಜಾಗರೂಕತೆ ಸ್ವಾಭಾವಿಕ. ಹಿಂತಿರುಗಿ ನೋಡಿದೆ. ಅಪಾಯ ಹಿಂದಿತ್ತು. ಹಿಂತಿರುಗಿದರೆ ಕುಪ್ಪಣ್ಣ!

'ಏನು ನನ್ರಾಜ, ನನ್ನ ಹಿಂದೆಯೇ ಬರುತ್ತಿದ್ದೆಯಾ? ಎತ್ತಲಾಗಿ ಹೊರಟೆ?' ಎಂದೆ.

'ಹೌದು ಕೊರವಂಜಿ, ನಿನ್ನ ಜತೆಯಲ್ಲೇ ಬರುತ್ತಿದ್ದೆ. ಏನೂ ಕೆಲಸವಿದ್ದಿಲ್ಲ. ಹಾಗೇ ಅಡ್ಡಾಡಿಕೊಂಡು ಮನೆಗೆ ಹೋಗೋಣವೆಂದು ಬಂದೆ' ಎಂದ.

ಹೋಟೇಲಿಗೆ ಕರೆದುಕೊಂಡು ಹೋಗುತ್ತೇನೇನೊ ಎಂಬ ಆಶೆಯಿದ್ದಿರಬಹುದು. ಆದರೆ ಆ ಸಂತೋಷವೂ ಆಶೆಯೂ ಮುಖದಲ್ಲಿ ಕಾಣಬರಲಿಲ್ಲ- ಇವನನ್ನು ಕಂಡಕೂಡಲೇ ನಾನೇನೊ ನಿರ್ಧಾರ ಮಾಡಿಕೊಂಡೆ-ಅವನಿಂದ ನನಗೆ ಎರಡಾಣೆ ಉಳಿತಾಯ. ಹಾಗೆಯೇ ಮಾತನಾಡುತ್ತಾ ನಮ್ಮ ಛಾವಡಿಯವರೆಗೂ ಅವನನ್ನು ಕರೆದುಕೊಂಡು ಹೋದೆ. ಅಲ್ಲಿ 'ಇನ್ನು ಹೋಗಿಬರಲೆ? ಎಂದು ಹೇಳಿ ಅಪ್ಪಣೆಯನ್ನು ತೆಗೆದುಕೊಂಡು ನನ್ನ ಕೆಲಸಕ್ಕೆ ಹೋದೆ.

* * *

ಮಧ್ಯಾಹ್ನಾ ಮನೆಗೆ ಬಂದು ಊಟ ಮಾಡಿದ ಮೇಲೆ ಸ್ವಲ್ಪ ಹೊತ್ತು ಹಾಗೇಯೇ ಮಲಗಿದ್ದೆ. ಯಾರೋ ಬಂದು ಎಬ್ಬಿಸಿದ ಹಾಗಾಯಿತು.

ಕಣ್ಣು ಬಿಟ್ಟರೆ ಕುಪ್ಪಣ್ಣ!

''ಸ್ವಲ್ಪ ಇರು ಕುಪ್ಪಣ್ಣಾ, ಮುಖ ತೊಳೆದುಕೊಂಡು ಬರುತ್ತೇನೆ,'' ಎಂದು ಹೇಳಿ ಒಳಕ್ಕೆ ಹೋಗಿ ಮುಖ ತೊಳೆದುಕೊಂಡೆ. ಅರ್ಧ ನಿದ್ರೆಯಲ್ಲಿ ಎಬ್ಬಿಸಿದನೆಂಬ ಕೋಪಕ್ಕಾಗಿ ಒಳಗೇ ಕಾಫಿಯನ್ನು ಕುಡಿದು ಕೊಠಡಿಗೆ ಬಂದೆ. ಬಂದು ''ಏನಯ್ಯಾ ಕುಪ್ಪಣ್ಣ ಇಷ್ಟು ಅವಸರದಲ್ಲಿ ಬಂದು ಎಬ್ಬಿಸಿದೆಯಲ್ಲಾ?'' ಎಂದು ಕೇಳಿದೆ.

'ಯಾಕೋ ಕೊರವಂಜಿ, ನಾನು ಎಬ್ಬಿಸಲೇ ಇಲ್ಲ. ನಾನು ಬಂದಾಗ ಕಣ್ಣು ಬಿಡುತ್ತಿದ್ದೆ' ಎಂದ.

'ನೀನು ಎಬ್ಬಿಸಲಿಲ್ಲವೇ ಹಾಗಾದರೆ!'

'ಇಲ್ಲಾಕಣೋ; ಹಾಗಾದರೆ ನಿದ್ರೆ ನಿನಗೆ ಸರಿಯಾಗಿ ಆಗಲಿಲ್ಲ ಎಂದು ಕಾಣುತ್ತೆ.'

'ಇಲ್ಲಾ- ಇಲ್ಲಾ-ಸೊಗಸಾದ ನಿದ್ರೆ- ಒಳ್ಳೆಯ ಕನಸು ಕೂಡಾ-'

'ಹಾಗಾದರೆ ಕನಸಿನಲ್ಲಿ ನಾನು ಬಂದೆದ್ದೆನೇ?'

ಕುಪ್ಪಣ್ಣನಿಗೂ ಒಂದೊಂದು ವೇಳೆ ಬಲು ಚಾಲೂಕಾದ ಆಲೋಚನೆಗಳು ಬರುವುದುಂಟು-ಸುಂಕದವನು ತಪ್ಪಿ ಹೆಚ್ಚು ಚಿಲ್ಲರೆ ಕೊಟ್ಟಂತೆ-ನನಗೆ ಹಾಗೆ ಯಾರಾದರೂ ಅಂದರೆ ಕುಹಕವಾಡುವಂತಾಗುತ್ತದೆ.

'ಹೌದು ಭೂಪತಿ, ನೀನು ಕನಸಿನಲ್ಲಿ ಬಂದಿದ್ದೆ. ದುರ್ಗಾಷ್ಟಮಿ ದಿನ. ನಿನ್ನನ್ನು ಕಾಳೀಗೆ ಬಲಿಕೊಟ್ಟು ಪೂಜಿಸುತ್ತಿದ್ದರು,'

''ಅದು ಸೊಗಸಾದ ಕನಸೇನೋ?'' ಎಂದು ಮೂಗನ್ನು ಗಲ್ಲದವರೆಗೂ ಇಳಿಬಿಟ್ಟುಕೊಂಡ.

ಅನ್ಯಾಯವಾಗಿ ಈ ಅರಿಯದವನ ಮನಸ್ಸನ್ನು ನೋಯಿಸಿದೆನಲ್ಲಾ ಎಂದು ನಾನೂ ನೊಂದುಕೊಂಡೆ.

'ಇಲ್ಲಾ ನಾಯಕಾ, ಈ ಕುಹಕಬುದ್ಧಿ, ಏನೋ ಹೇಳಿದೆ; ಅದನ್ನು ಮನಸ್ಸಿಗೆ ತಂದುಕೊಳ್ಳುವುದೇ,' ಎಂದೆ.

ಆ ವೇಳೆಗೆ ಅವನು ನಾನು ಹೇಳಿದುದನ್ನು ಮನ್ನಿಸಿದ್ದ; ಮರೆತೂಬಿಟ್ಟಿದ್ದ. ಜ್ಞಾಪಕ ಇಟ್ಟುಕೊಳ್ಳಲೂ ಆಗುತ್ತಿದ್ದಿಲ್ಲ.

'ನೀನು ಅಲ್ಲದೆ ಇನ್ಯಾರು ಅನ್ನುತ್ತಾರೆಯೋ!' ಎಂದು ಹೇಳಿದ.

'ಅದಿರಲಿ. ಇದೇನು, ಇಷ್ಟು ಹೊತ್ತಿನಲ್ಲಿ ಬಂದೆಯಲ್ಲಾ?'

'ನೋಡು; ಇವತ್ತು ಬೆಳಿಗ್ಗೆ ಆಸ್ಪತ್ರೆಗೆ ಹೋಗಿದ್ದೆ-ನನ್ನ ತಂಗಿಯ ಮಗುವನ್ನು ಎತ್ತಿಕೊಂಡು ಡಾಕ್ಟರಿಗೆ ತೋರಿಸಲು ಕರೆದುಕೊಂಡು ಹೋಗುತ್ತಿದ್ದೆ. ನೋಡಿದವರೆಲ್ಲರೂ 'ನಿನ್ನದೇನೊ ಮಗು' ಇಷ್ಟು ಚೆನ್ನಾಗಿದೆ? ಎಂದರು. ' ಒಳ್ಳೇ ಪೀಕಲಾಟಕ್ಕೆ ಸಿಕ್ಕಿಹಾಕಿಕೊಂಡೆ,' ಎಂದ.

ಇವನು ಇವನ ತಂಗಿಯ ಮಗುವನ್ನು ಎತ್ತಿಕೊಂಡು ಹೋಗುತ್ತಿದ್ದರೆ, ನೋಡಿದವರೆಲ್ಲರೂ ಇವನನ್ನು ಯಾಕೆ ಕೇಳಬೇಕು? ಇವನೇನು ಕಳುವು ಮಾಡಿಕೊಂಡು ಹೋಗುತ್ತಿದ್ದನೇ? ಹಾಗೆ ಕೇಳಿದರೆ ಇವನಿಗೇನು ಪೀಕಾಲಾಟವೋ ಕಾಣೆ! ಅದು ಅಷ್ಟು ಹೆಚ್ಚಿನ ಸಂಗತಿಯೇ ನನ್ನನ್ನು ಎಬ್ಬಿಸಿ ಹೇಳುವುದಕ್ಕೆ? ಇದೊಂದೂ ಅವನಿಗೆ ಬೇಕಾಗಿದ್ದಿಲ್ಲ. ಆ ದಿನ ನಡೆದ ಒಂದು ವಿಚಾರದಲ್ಲಿ ಅವನು ಮುಖ್ಯ ಪಾತ್ರ ವಹಿಸಿದವನು. ಅದನ್ನು ನನಗೆ ತಿಳಿಸಬೇಕೆಂದೇ ಅವನ ಆಶೆ. ಅದರಲ್ಲಿ ಅಸಂಬದ್ಧ ವಿಷಯಗಳಿರಲಿ, ಆಗಲಾರದುದಿರಲಿ, ಅಪ್ರಕೃತವಾಗಿರಲಿ, ಅವೆಲ್ಲವೂ ಅವನನ್ನು ಬಾಧಿಸುತ್ತಿರಲಿಲ್ಲ. ಈ ವಿಚಾರದಲ್ಲಿ ಅವನ ಮನಸ್ಸು ಕನಸಿನಂತೆ: ಕನಸಿನಲ್ಲಿ ನೋಡಿ, ನಾವೇ ಮುಖ್ಯ ಪಾತ್ರಧಾರಿಗಳು. ದೇವರು ಮೊದಲುಗೊಂಡು ಎಲ್ಲರೂ ನಮ್ಮ ಅನುಯಾಯಿಗಳು. ಅಂತೆಯೇ ಕುಪ್ಪಣ್ಣ.

'ಇದು ಹೇಳುವುದಕ್ಕೋಸ್ಕರ ಇಲ್ಲಿಗೆ ಬಂದೆಯಾ?' ಎಂದು ಬಟ್ಟೆ ಹಾಕಿಕೊಳ್ಳಲು ಆರಂಭಿಸಿದೆ. ಬಟ್ಟೆ ಹಾಕಿಕೊಂಡು ಹೊರಗಡೆಗೆ ಅವನನ್ನೂ ಕರೆದುಕೊಂಡು ಬಂದೆ. ಅಲ್ಲಿದ್ದ ಸೈಕಲ್ ತೆಗೆದುಕೊಂಡು 'ಇನ್ನು ಬರುತ್ತೇನೆ ಕುಪ್ಪಣ್ಣಾ. ನನಗೆ ಕೆಲಸವಿದೆ,' ಎಂದು ಹೇಳಿ ಹೊರಟೆ.

ಸೈಕಲ್ ಹತ್ತಿಕೊಂಡು ಭಾವಡಿಯ ಕಡೆಗೆ ಹೋಗಿ ಅಲ್ಲಿ ಸ್ವಲ್ಪ ಹೊತ್ತಿದ್ದು ನಂತರ ಹಾಗೆಯೇ ಹೊರಟೆ. ಸಾಯಂಕಾಲ - ಆ ದಿನ ನಿದ್ರೆ ಬೇರೆ ಮಾಡಿದ್ದೆ - ಯಾವುದಾದರೂ ಒಂದು ಸಿನೀಮಾಕ್ಕೆ ಹೋಗೋಣವೆಂದು ಯೋಚಿಸಿ ಹತ್ತಿರಿದ್ದ ಸಿನೀಮಾ ಮಂದಿರದ ಕಡೆಗೆ ಹೊರಟೆ. ಅಲ್ಲಿ ಬೈಸಿಕಲ್ಲುಗಳನ್ನು ಇಡುವ ಕಡೆಗೆ ಬೈಸಿಕಲ್ಲನ್ನು ಇಡಲು ಹೋಗುವಾಗ್ಗೇ ಯಾರೋ ನನ್ನನ್ನು ಕೂಗಿದರು.

ದನಿ ಬಂದ ಕಡೆ ನೋಡಿದರೆ ಕುಪ್ಪಣ್ಣ!

ಇವತ್ತು ಕುಪ್ಪಣ್ಣ ಸಿನೀಮಾದ ಒಂಭತ್ತಾಣೆ ಮಿಗಿಸಿದ ಎಂದುಕೊಂಡು 'ಇದೇನೊ, ಇಲ್ಲಿಗೆ ಬಂದಿದ್ದೀಯೆ?' ಎಂದೆ.

'ಸುಮ್ಮಗೆ ಹಾಗೇ ವಾಕಿಂಗ್ ಬಂದಿದ್ದೆ. ಸಿನಿಮಾಕ್ಕೆ ಹೋಗುತ್ತಿದ್ದಿಯೇನೋ? ಹೋಗು.' ಎಂದ.

'ನೀನೂ ಬರುತ್ತೀಯೇನು' ಎಂದೆ? ಹಾಗೆನ್ನುವಾಗ ಅವನೂ ಸಿನೀಮಾಗಾಗಿಯೇ ಬಂದಿದ್ದಾನೆ, ನಾನೂ ಕೂಡ ಬಂದಿದ್ದೇನೆ, ಇಬ್ಬರೂ ಒಟ್ಟಿಗೆ ಅವರವರ ಖರ್ಚಿನಲ್ಲಿ ಒಳಗೆ ಹೋಗೋಣವೆಂದು ನನ್ನ ಯೋಚನೆ. ಆದರೆ ಅದು ಕುಪ್ಪಣ್ಣನ ಮುಂದಿನ ಮಾತಿನಿಂದ ಭಂಗವಾಯಿತು.

'ಇಲ್ಲಾ ಕಣೊ, ನನ್ನ ಹತ್ತಿರ ದುಡ್ಡೇ ಇಲ್ಲ. ನೀನು ಬಾ ಎಂದರೆ ಬರುತ್ತೇನೆ' ಎಂದ.

ನಾನು ಆಡಿದ ಮಾತು ಈ ರೀತಿಯಲ್ಲಿ ಪರ್ಯವಸಾನವಾಯಿತು. ಇವನ ಮನಸ್ಸನ್ನು ಮಧ್ಯಾಹ್ನವೆಲ್ಲಾ ನೋಯಿಸಿದ್ದೇನೆ. ಈಗಲಾದರೂ ತಂಪು ಮಾಡೋಣವೆಂಬ ಆಶೆ ತಲೆದೋರಿತು. ಪಾಪ, ಸರಳ ಹೃದಯಿ. ಇವನನ್ನು ಸಂತೋಷಪಡಿಸೋಣವೆಂದಿನ್ನಿಸಿತು.

ಅಂತೂ ಆ ದಿನ 'ಬಾ ನನ್ರಾಜ' ಎಂದು ಸಿನೀಮಾಕ್ಕೆ ಕರೆದುಕೊಂಡು ಹೋದೆ.

ಸಿನೀಮಾದಲ್ಲಿ ಒಂದು ಸಿಗರೇಟ್ ಸೇದೋಣ ಎನ್ನಿಸಿತು. ನನ್ನ ಸ್ನೇಹಿತರ ಕೈಲಿ ಹಣವನ್ನು ಕೊಟ್ಟು ಸಿಗರೇಟು ತಾರೆಂದರೆ, ಚಿಲ್ಲರೆಯನ್ನು ಮಾಮೂಲಾಗಿ ಅವರೇ ಇಟ್ಟುಕೊಂಡು ಮರೆತಂತೆ ನಟಿಸಿ, ಸಿಗರೇಟ್ ಪೆಟ್ಟಿಗೆಯನ್ನೂ ತಾವೇ ಇಟ್ಟುಕೊಂಡು ನನಗೊಂದನ್ನು ಕೊಡುವುದು ವಾಡಿಕೆ. ಆದಷ್ಟು ಸಿಗರೇಟನ್ನು ಗಿಟ್ಟಿಸೋಣ ಎಂದು ಐದೈದು ನಿಮಿಷಕ್ಕೂ ಒಂದೊಂದನ್ನು ತೆಗೆದುಕೊಂಡು ಸೇದಿ ಸೇದಿ ಗಂಡಲನ್ನೆಲ್ಲಾ ಗಾರುಮಾಡಿಕೊಳ್ಳುತ್ತಿದೆ. ಚಿಲ್ಲರೆಯನ್ನೇನಾದರೂ ಕೇಳಿದೆನೊ, ಅದು ವಿರಾಮ ಕಾಲದಲ್ಲಿ ತಿಂಡಿಯ ಪಾಲಾಗುತ್ತಿತ್ತು. ಇದೆಲ್ಲದರ ಅನುಭವವೂ ಸಾಕಷ್ಟು ಆಗಿತ್ತು. ಕುಪ್ಪಣ್ಣನನ್ನು ಸಿಗರೇಟ್ ತಾರೆನ್ನಲು ಭಯ. ನನಗೆ ಹೋಗಿ ತರಲು ಬೇಜಾರು. ಸ್ವಲ್ಪಹೊತ್ತು ಆಶೆಯನ್ನು ನಿಗ್ರಹಿಸಿದೆ. ಆದರೆ ಧೂಮ್ರಪಾನದ ಆತುರವು ಹೆಚ್ಚಾಯಿತು. ಕಡೆಗೆ 'ಕುಪ್ಪಣ್ಣಾ ಸಿಗರೇಟು ಇಲ್ಲವಲ್ಲೊ? ಹೋಗಲು ಬೇಜಾರು' ಎಂದೆ.

'ಅದಕ್ಕೇನೊ, ನಾನು ಹೋಗಿ ತರುತ್ತೇನೆ. ಆದರೆ ನನ್ನಲ್ಲಿ ಹಣವಿಲ್ಲವಲ್ಲಾ!' ಎಂದ.

ಅದನ್ನು ಕೇಳಿಯೇ ನನಗೆ ಸಂತೋಷವಾಯಿತು. ಹಣವನ್ನು ಕೊಟ್ಟೆ. ಸಿಗರೇಟನ್ನು ಕೊಂಡುತಂದು ಚಿಲ್ಲರೆಯಷ್ಟನ್ನೂ ಸಿಗರೇಟು ಪಟ್ಟಿಗೆಯನ್ನೂ ನನ್ನ ಕೈಲಿ ಕೊಟ್ಟ. ನಾನು ತೆಗೆದುಕೊಟ್ಟ ಒಂದು ಸಿಗರೇಟನ್ನೇ ಸೇದಿದ. ಮರಳಿ ನಾನು ಕೊಡುವ ತನಕ ಇನ್ನೊಂದನ್ನೂ ಕೇಳಲಿಲ್ಲ.

ಸಿನೀಮಾ ಆದ ನಂತರ ಅವನನ್ನು ಮನೆಯಲ್ಲಿ ಬಿಟ್ಟು, ನಂತರ ಮನೆಗೆ ಹೋಗೋಣವೆನ್ನಿಸಿತು. ಸೈಕಲ್ಲನ್ನು ಕೈಯಲ್ಲಿ ನೂಕಿಕೊಂಡು ಅವನೊಡನೆ ಆ ಮಾತು ಈ ಮಾತು ಆಡುತ್ತಾ, ಅವನ ಮನೆಯ ಕಡೆಗೆ ಹೊರಟೆ. ಅವನ ಮನೆಯೂ ಸಿಕ್ಕಿತು.

'ಹೊರಡ್ತೀಯಾ ಕುಪ್ಪಣ್ಣ?' ಎಂದು ದೀಪವನ್ನು ಹಚ್ಚಿಕೊಂಡು ಹೊರಡಲೆತ್ನಿಸುತ್ತಿರುವಾಗ ಆ ಹಾಳು ಸರಪಣಿಯು ಕಳಚಿಕೊಂಡಿತು. ಸರಪಣಿಯನ್ನು ಪೋಣಿಸಹೋದರೆ ಕೈಯೆಲ್ಲಾ ಕೀಲೆಣ್ಣೆ ಆಗುವುದು. ಹಾಗೆಯೇ ನಡೆದೇ ಮನೆಗೆ ಹೋಗಲೇ ಎಂದನ್ನುತ್ತಿತ್ತು ಮನಸ್ಸು.

ಆ ವೇಳೆಗೆ ಕುಪ್ಪಣ್ಣ ಇನ್ನೂ ಮನೆಯೊಳಕ್ಕೆ ಹೋಗಿದ್ದಿಲ್ಲ. ಸರಪಳಿಯು ಬಿದ್ದದ್ದನ್ನು ಕಂಡು ಹಿಂತಿರುಗಿದ. ತಾನೇ ಬಂದು ಅದನ್ನು ಸರಿಮಾಡಿದ. ನಂತರ 'ಹೋಗಿಬರುತ್ತೇನೆ' ಎಂದು ಹೇಳಿ ಮಶಿಯ ಕೈಯಿಂದ ಸಲಾಮು ಹಾಕಿ ಮನೆಗೆ ಹೋದ.

ಅವನು ಮನೆಯ ಒಳಕ್ಕೆ ಹೋಗುವವರೆಗೂ ಅವನನ್ನೆ ನೋಡುತ್ತಾ ನಿಂತೆ. ನಂತರ ಅವನ ಸರಳ ಮನಸ್ಸನ್ನೂ. ನಿಷ್ಕಪಟ ವಿಶ್ವಾಸವನ್ನೂ ನೆನಸಿಕೊಳ್ಳುತ್ತಾ ನಡೆದು ಮನೆಗೆ ಹೋದೆ.

ಆಗನ್ನಿಸಿತು-ನಮ್ಮ ಸಹಪಾಠಿಗಳಲ್ಲಿ, ಸ್ನೇಹಿತರಲ್ಲಿ, ವಿದ್ಯಾವಂತರಿಲ್ಲದಿದ್ದರೆ ಬೇಡ, ಶಕ್ತಿಯುತರಿಲ್ಲದಿದ್ದರೂ ಪರವಾಗಿಲ್ಲ ಈ ತೆರನಾದ ನಿಷ್ಕಪಟಿಗಳು ಇದ್ದರೆ ನಾವು ಪುಣ್ಯಶಾಲಿಗಳು ಎಂದು. ಅಂತವರ ಸ್ನೇಹ ವಿಶ್ವಾಸಗಳಿಗೆ ನಾವು ಮಾತ್ರ ಅರ್ಹರೇ? ಎಂಬ ಅನುಮಾನವೂ ತಲೆದೋರಿತು. ☺




"ತೆರಿಗೇ ಜಾಸ್ತಿ ಮಾಡ್ತಾರಂತೆ, ಈಗ್ಲೇ ಕುಡುದ್ಬುಡು!!"

ಬಾ ಬಾ ಕೊಜೆಂಟ್ರಿಕ್ಸ್

(ನವ್ಯ ಶಿಶು ಗೀತೆ)

O ಮಮ್ತಾಜ್ ಬೊಳುವಾರು



ಬಾ ಬಾ ಕೊಜೆಂಟ್ರಿಕ್ಸ್
ಶಾಕ್ ಕೊಡು ಬಾ.

ಮನೆ ಬಿಟ್ಟಿದ್ದು ಜಾಗ ಕೊಡುವೆ
ಕಾಡು ಕಡಿದು ಸೈಟು ಕೊಡುವೆ
ಬಾ ಬಾ ಕೊಜೆಂಟ್ರಿಕ್ಸ್
ಜಾಗ ತಿನ್ನು ಬಾ.

ಶುದ್ಧವಾದ ಗಾಳಿ ಕೊಡುವೆ
ಸ್ವಚ್ಛಹರಿವ ನೀರು ಕೊಡುವೆ
ಬಾ ಬಾ ಕೊಜೆಂಟ್ರಿಕ್ಸ್
ರಾಡಿ ಮಾಡು ಬಾ.

ಸಾಲ ಮಾಡಿ ಹಣವ ಸುರಿವೆ
ಬುದ್ಧಿಯೆಲ್ಲ ಧಾರೆ ಎರೆವೆ
ಬಾ ಬಾ ಕೊಜೆಂಟ್ರಿಕ್ಸ್
ಮೋಜು ಮಾಡು ಬಾ.

ಆಟದ ಸಾಮಾನೆಲ್ಲ ಕೊಡುವೆ
ನಾನೇ ನಿನಗೆ ಆಟಿಕೆಯಾಗುವೆ
ಬಾ ಬಾ ಕೊಜೆಂಟ್ರಿಕ್ಸ್
ಕೊನೆಯಾಟ ಆಡು ಬಾ.

ಪುಣ್ಯಭೂಮಿ

O ಡಾ|| ಶರಣಬಸವೇಶ್ವರ ಅಂಗಡಿ.

ನಮ್ಮ ಭರತ ಖಂಡ ಪುಣ್ಯಭೂಮಿ. ಆರ್ಯರ ಕಾಲದಿಂದ್ಲೂ ನಮಗ ನೇಗಿಲ ಪರಿಚಯ ಅದ. ಬಲರಾಮ, (ಅದ, ಶ್ರೀಕೃಷ್ಣನ ಅಣ್ಣ ನೇಗಲಾ ಹೊತಕೊಂಡು ನಿಂತಿರ್‍ತಾನಲ್ಲ, ಅವನ) ನಮ್ಮ ಆರಾಧ್ಯ ದೈವ. ಭೂಮಿ ಉತ್ತು, ಬಿತ್ತಿ, ಮುತ್ತಿನಂಥ ಕಾಳು ಬೆಳಿಯೂ ಕಲಿ ನಮ್ಮ ತಲ್ಯಾಗ ಮೊದಲಿಂದಾನೂ ಐತಿ. ಅದೇನೋ ಶ್ರೀಮಂತ ದೇಶಗೊಳಾಗ ನೂರಕ್ಕ ಬರೇ ಹತ್ತ ಮಂದಿ ಒಕ್ಕಲತನಾ ಮಾಡಿ ಇಡೀ ದೇಶಕ್ಕನ ಸಾಕಾಗಿ ರಫ್ತೂ ಮಾಡುವಷ್ಟು ಆಹಾರ ಬೆಳೀತ್ಯಾರಂತ, ದೇಶಾನ್ನ ಸಮೃದ್ಧ ಮಾಡ್ಯಾರಂತ. ನನಗ ಅನುಮಾನ ಬರ್‍ತದ. ಅಲ್ಲಿನ ಮಂದಿ ಸರ್‍ಯಾಗಿ ಊಟ ಮಾಡ್ತಾರೋ ಇಲ್ಲೋ ಅಂತ. ಇಲ್ಲಾಂದ್ರೆ ಬರೇ ಶೇಕಡಾ ಹತ್ತರಷ್ಟ ಮಂದಿ ಉತ್ಪಾದನಾ ಮಾಡಿದ್ದು ಅಷ್ಟೂ ಮಂದೀಗೆ ಹ್ಯಾಂಗ ಸಾಕಾದೀತು? ನಮ್ಮಲ್ಲೇ ನೋಡ್ರೇಲಾ, ನೂರಕ್ಕ ಎಪ್ಪತ್ತು ಮಂದಿ ಬೇಸಾಯ ಮಾಡ್ತಾರ. ಆದರೂನೂ ಸಮೃದ್ಧಿಯಿಂದ ಭಾಳ ದೂರ ಆದೀವಿ? ಇದ್ರಾಗೇನರ ಫಾರಿನ್ ಹ್ಯಾಂಡ್ ಅದ ಅಂತಿರೇನು? ಹ್ಹೆ...ಹ್ಹೆ...ಹ್ಹೆ... ನನ್ನ ವಿಚಾರದಾಗ ಎಪ್ಪತ್ತ ಯಾಕ ನೂರಕ್ಕ ನೂರರಷ್ಟು ಮಂದಿ ಹೊಲದಾಗ ದುಡದರ ಛಲೋ. ನಿರುದ್ಯೋಗ ಸಮಸ್ಯಾನ ಇರೂದಿಲ್ಲ. ಈ ಸಂಗತಿ ನನಗ ತಿಳೀತದ ಅಂದಮ್ಯಾಲ ಬುದ್ಧಿವಂತರು ಅನ್ನಿಸ್ಕೊಂಡವರಿಗಿ ತಿಳಿಯಾಂಗಿಲ್ಲಲ್ಲ ಅಂತ ನನಗ ಬಾಳ ದುಃಖ ಆಗ್ಲಿಕ್ಕಹತ್ಯದ. ನಾವು ಇಷ್ಟ ಛಂದ ವಿಚಾರ ಮಾಡಿದರೂ, ನಮ್ಮನ್ನ ನಗಿಚಾಟಿಕಿ ಮಾಡ್ತೀರಿ. ರಾಜಕಾರಣಿಗೋಳಿಗೀ ಬುದ್ಧಿ ಇಲ್ಲ ಅಂತೀರಿ. ನಮ್ಮ ದುರ್ದೈವ.

ನಾವು ಬೆಳೆದ ಆಹಾರ ನಮಗ ಸಾಕಾಗೂದಿಲ್ಲ ಅನ್ನೂದನ್ನ ನಾ ಒಪ್ಪೂದಿಲ್ಲ. ಯಾವದರ ಮದಿವೀ ಮನೀಗಿ ಕಲ್ಯಾಣ ಮಂಟಪಕ್ಹೋಗಿ ನೋಡ್ರಿ, ಇಲ್ಲಾಂದ್ರ ಫಾಯಿವ್‌ಸ್ಟಾರ್ ಹೋಟೇಲ ನೋಡ್ರಿ, ಅಲ್ಲಿ ಹ್ಯಾಂಗ ಜನ ತಿಂದು, ತೇಗಿ, ಊಟ ತಾಟಿನ್ಯಾಗ ಹಂಗ ಬಿಟ್ಟು ಹೋಗ್ತಾರ. ಇನ್ನ ಉಪವಾಸ ಇವರೋ ಮಂದೀಗಿ ನಾವೇನು ಮಾಡ್ಲಿಕ್ಕಾಗ್ತದ. ಸೋಮಾರಿ ಮಂದಿ, ದುಡ್ಯಾಂಗಿಲ್ಲ, ದುಡೀಲಿಲ್ಲಂದ್ರ ರೊಕ್ಕ ಎಲ್ಲಿಂದ ಬರ್ತಾವ? ಉಣ್ಣಾಕ ಎಲ್ಲಿಂದ ಸಿಕ್ತತಿ?

ನಮ್ಮ ರೈತರು ಬಡವರು ಹೌದು, ಅದ್ರಾಗೇನದ? ಬಡವರಾಗಿರೂದು ಅವಮಾನೇನಲ್ಲ, ಕುಚೇಲ ಬಡವ ಆಗಿರ್‍ಲಿಲ್ಲೇನ? ಆದರೂ ಅಂವಾ ಎಷ್ಟ ಫೇಮಸ್ ಆದ. The meek shall inherit the earth ಅಂತ ಏಸು ಮಹಾತ್ಮನ ಹೇಳ್ಯಾನಲ್ರಿ. ಈ meek ಮಂದೀ ಬಲದ ಮ್ಯಾಲೆ ಕೊನೀಗ ಇಡೀ ಪ್ರಪಂಚನ ನಮ್ಮದಾತಪ್ಪಾಂತಂದ್ರ, ಎಷ್ಟ ಆರಾಮಿಲೆ ರಾಜರ್‍ಹಾಂಗ ಇರಬಹುದು. ಜತೀಗಿ ರೈತರು ಬಡವರಾಗಿದ್ರನ ಛಲೋ. ಅವ್ರು ರೊಕ್ಕ ಗಳಿಸ್ಲಿಕ್ಕ ಹತ್ತಿದ್ರಂದ್ರ ನಮ್ಹಾಂಗ ಹೊಟ್ಟೀ ಬೆಳಿಸಿಕೊಂಡು ಕುಂಡ್ರತಾರ. ಮತ್ತ ಹೊಲದಾಗ ಕೆಲಸ ಮಾಡವ್ರ್ಯಾರು? ನಮ್ಮ ಹೊಟ್ಟೀ ಹ್ಯಾಂಗ ತುಂಬಬೇಕು? ಗಾದೀನ ಅದಲ್ಲ "ಬಡವಾ ನೀ

ಮಡಗಿದ್ದಾಂಗಿರು,'' ಅಂತ. ನಾವು ಮಡಗಿದ್ದಾಂಗ ಅವರಿರಬೇಕು ಅಂದ್ರ ಅವರು ಬಡವರಾಗೇ ಇರಬೇಕ್ರಿ. ಬೇಸಾಯ ಬದುಕಿನ ಬೆನ್ನೆಲುಬು ಅಂತಾರ. ಆ ಬೇಸಾಯಕ್ಕ ಬಲ ಬರಬೇಕಂದ್ರ ರೈತನ ಬೆನ್ನೆಲುಬು ಗಟ್ಟಿ ಆಗ್ಬೇಕು. ಅದಕ್ಕಂತ ಅವನ ಹೊಟ್ಟೀ ಬೆನ್ನಿಗಂಟಿಸಿ ಬೆನ್ನೆಲುಬಿಗಿ ಸಪೋರ್ಟ್ ಸಿಗುವ್ಹಾಂಗ ಮಾಡೇವಿ. ಅದು ಹಂಗSS ಇದ್ರನSS ಅಂವಾ ಜಾಸ್ತಿ ಶಕ್ತೀಲಿಂದ ದುಡೀತಾನ. ರೈತ ಅನ್ನದಾತ ಅಂದ್ರ ಅನ್ನ ಕೊಡಾಂವ. ಅವನ ಅನ್ನಕ್ಕ ಖೋತಾ ಆದ್ರೂ ಅಂವ ತಡಕೋಬೇಕು. ತಾ ಉಪಾಸ ಇದ್ದು ಬ್ಯಾರೇವ್ರ ಹೊಟ್ಟೀ ತುಂಬಿಸೋದSS ದೊಡ್ಡತನ!

ನೀರಾವರೀಗಿ ನೀರಿಲ್ಲ, ನೀರಿಲ್ಲ ಅಂತ ಮಂದಿ ಸುಳ್ಳ, ಸುಳ್ಳೇ ಬಡಕೋತಾರ. ಈ ವಿಜ್ಞಾನಿಗೋಳು, ಕೃಷಿತಜ್ಞರು ಅದಾವಲ್ಲ, ಅವಕ್ಕೇನೂ ಗೊತ್ತಿಲ್ಲ. ಜಲ ಬತ್ತಿ ಹೋಗ್ತತೀ ಅಂತಾವ. ಎಲ್ಲಿ ಹೋಕ್ಕೈತ್ರಿ. ಇವು ಎಲ್ಲ್ಯೋ ದಂತದ ಗೋಪುರದಾಗ ಕುಂತು ನೀರು ನೋಡಬೇಕಂದ್ರ ಹ್ಯಾಂಗ ಕಾಣಸ್ತತಿ. ನಮ್ಮ ಭೀಮಸಂದ್ರದ ಕೆರೀ ನೋಡಸ್ರಿ, ಅವಕ್ಕ. ಮೊನ್ನೆ ನಾ ನೋಡೇನೀ. ಕೆರೀ ತುಂಬಿ ಕೋಡಿ ಹರಿದಿತ್ತು. ಈ ಖೋಡಿಗೋಳು ಸುಮ್ಮ ಸುಮ್ಮನೇ ಬಡ್ಕೊತಾವ. ನಾವು ಅಷ್ಟು ಸಲೀಸಾಗಿ ಬಿಡ್ತೇವೇನು ನೀರು? ಗಂಗವ್ವ ಸ್ವರ್ಗದಾಗಿದ್ರೂ ಬಿಡ್ಲಿಲ್ಲ. ನಮ್ಮ ಭಗೀರಥ ಮಾರಾಜ ಆಕೀನ್ನ ಅಲ್ಲಿಂದ ಕೆಳಗಿಳಿಸ್ಲಿಲ್ಲೇನSS, ಈ ಪುಣ್ಯ ಭೂಮಿಗೆ ತರ್ಲಿಲ್ಲೇನ, ಅವನ ಸಂತಾನ ನಾವು. ಅಂವ ಕರಕೊಂಡ ಬಂದ್ರ ಆಕಾಶಗಂಗಿ, ಅಂತರ ಗಂಗಿ ಆದರ ನಾವು ಬಿಡೂದಿಲ್ಲ. ಆದೇ ಬೆನ್ನಟ್ಟಿ ಹೋಗ್ತೀವಿ, ನೆಲದಾಗ ಹೋದರ ನೆಲಕೊರದು ಅಗೀತೀವಿ. ಎಷ್ಟಾರ ಒಳಗ ಹೋಗಲಿ ಅಷ್ಟೂ ಒಳಗ ಹೋಗಿ ಹೊರಕ್ಕ ತರ್ತೀವಿ. ಗಂಗವ್ವನ್ಯ ನೆಲದಾಗ ನೀರಿಗಿ ಬರ ಅಂದ್ರೇನ್ರೀ? ಅದು ಅಸಾಧ್ಯ.

ಮೊನ್ನೆ ಒಬ್ಬಾಂವ ಗಡ್ಡದ ಜೋಗಿ ಬಂದಿದ್ದ. ಕೃಷಿ ವಿಜ್ಞಾನಿ ಅಂತ, ಡಾಕ್ಟೋರೇಟ್ ಬ್ಯಾರೆ ಮಾಡ್ಯಾನಂತ. ಆದ್ಯಾರು ಅಂವಗ ಡಾಕ್ಟೋರೇಟ್ ಕೊಟ್ರೋ, ಅದೊಂದು ದಂಡ. 'ಸಾಹೇಬ್ರ, ನಮ್ಮ ರೈತರ ಪಾಡು ವ್ಯವಸಾಯೀ ನೀ ಸಾಯಿ ಅನ್ನೂ ಹಂಗಾಗ್ಯದ್ರಿ' ಅಂದ. ''ಏ ಮರುಳ, ಆತ್ಮಕ್ಕೆ ಸಾವಿಲ್ಲ, ನೈನಂ ಛಿಂದತಿ ಶಸ್ತ್ರಾಣಿ'' ಅಂತ್ಹೇಳಿದೆ. ಅಂವ ಸಿಟ್ಟಿನಿಂದ ''ನಿಮ್ಮ ಶಸ್ತ್ರ ಮೊಂಡು, ಅದಕ್ಕನSS ಅದು ನೈನಂ ಛಿಂದತಿ'' ಅನ್ನೂದಾSS

ಜನಕ್ಕ ನೆಲದ ಬೆಲೀ ಗೊತ್ತಿಲ್ರಿ. ಚಿನ್ನ ಬೆಳಿಯೂ ಮಣ್ಣಿನ್ನ ರಾಗಿ, ಜ್ವಾಳ, ಬೆಳದು ಹಾಳ ಮಾಡ್ತಾವ ಈ ಮೂಳ ಮಂದಿ. 'ಅದರಾಗ್ಯ ಬಂಗ್ಲೆ ಕಟ್ರಿ, ಷಾಪಿಂಗ್ ಕಾಂಪ್ಲೆಕ್ಸ್ ಕಟ್ರಿ, ಫಾಯೀವ್ ಸ್ಟಾರ್ ಹೋಟೀಲ ಕಟ್ರಿ, ಇಲ್ಲಾಂದ್ರ ಹೂ ಬೆಳದು ಹೊರದೇಶಕ್ಕ ಮಾರ್ರಿ. ರೊಕ್ಕ ಗಳಸ್ರಿ'' ಅಂತ್ಹೇಳಿದ್ರ ಕೇಳಾಂಗಿಲ್ಲ.

ಮೊನ್ನಿ ನಮ್ಮ ಅಗ್ಲಿಕಲ್ಚರ್ (Ugly-culture) ಅಲ್ಲಲ್ರಿ, ತಪ್ಪಾತು ಅಗ್ರಿಕಲ್ಚರ್ (Agriculture) ಮಿನಿಷ್ಟ್ರು ಭೆಟ್ಯಾಗಿದ್ರು. ' ಆರಾಮದೀರೇನ್ರೀ ಸರSS' ಅಂತ ಕೇಳಿದ್ದಕ್ಕ'ಹೋ ಭಾಳ ಆರಾಮದೀನಿ' ಅಂದ್ರು. ನಮ್ಮ ರೈತರ ಪರಿಸ್ಥಿತಿ ಖರೇನ ಹದಗೆಟ್ಟಿತ್ತಪ್ಪಾಂತಂದ್ರ ಅವ್ರು ಆರಾಮ ಇರೂದು ಶಕ್ಯ ಅದSSನ. The very fact that he is ಆರಾಮ್ proves that all is very well with this ಪುಣ್ಯಭೂಮಿ.

ಜಯ ಭಾರತ ಜನನಿಯ ತನುಜಾತೆ! ಜಯಹೇ ಕರ್ನಾಟಕ ಮಾತೆ!

ಬರಲಿರುವ ಪ್ರಕಟಣೆಗಳು

(ನಿಮ್ಮ ಪ್ರತಿಗಳನ್ನು ಇಂದೇ ಕಾದಿರಿಸಿ)

○ ಶಿವು

ಕಾದಂಬರಿ



ಖ್ಯಾತ ಕಾದಂಬರಿಕಾರ್ತಿ ಸುಷ್ಮಾ ಅವರ ಮುನ್ನೂರ ಹದಿನೇಳನೆಯ ಕಾದಂಬರಿ ಇದು. ಸಮಕಾಲೀನ ಪರಿಸ್ಥಿತಿಯನ್ನು ಸಂಪೂರ್ಣವಾಗಿ ಅರಿತು, ಅದರ ಹಿನ್ನೆಲೆಯಲ್ಲಿ ಪ್ರಣಯ ಮೂಡಿಸುವುದು ಈ ಲೇಖಕಿಯ ವೈಶಿಷ್ಟ್ಯ. ಈ ವಿದ್ಯುತ್ ಕಟ್ ದಿನಗಳಲ್ಲಿ, ಸುರೇಶ, ತನ್ನ ಬವಣೆಯನ್ನು ನೀಗಲು ಒಂದು ಜನರೇಟರ್ ಕೊಳ್ಳುತ್ತಾನೆ. ಸಂಜೆಯ ಪವರ್ ಕಟ್‌ನ ಮಧುರ ಘಳಿಗೆಗಳನ್ನು ತನ್ನ ಇನಿಯನ ಬಾಹು ಬಂಧನದಲ್ಲಿ ಕಳೆದಿದ್ದ ರೇಖಳಿಗೆ, ಆ ಹಾಳು ಜನರೇಟರ್ ಮೇಲೆ ಸವತಿ ಮತ್ಸರ ಉಂಟಾಗುತ್ತದೆ. ಜನರೇಟರ್ ಇಂಧನಕ್ಕೆ ಸಕ್ಕರೆ ಬೆರೆಸಿ, ರೇಖಾ ತನ್ನ ಸೇಡು ತೀರಿಸಿಕೊಳ್ಳುತ್ತಾಳೆ. ಜನರೇಟರ್ ಸ್ಟಾರ್ಟ್ ಆಗದೇ, ಗೊರ್ರ್, ಗೊರ್ರ್, ಎಂದು ಒದ್ದಾಡುವುದನ್ನು ಲೇಖಕಿ ಅತ್ಯಂತ ಹೃದಯ ವಿದ್ರಾವಕವಾಗಿ ಚಿತ್ರಿಸಿದ್ದಾರೆ.

ಕವನ ಸಂಕಲನ



ಕವಿ ನೀಲಾಭ್, ತಮ್ಮ ಕವನಗಳಿಗೆ, ವಸ್ತು ಆಯ್ಕೆ ಮಾಡಿರುವ ರೀತಿಯೇ ವಿಚಿತ್ರ. ಸ್ಪಾರ್ಕ್ ಪ್ಲಗ್ ದುರಂತ, ಛತ್ರಿ ಮತ್ತು ಮಳೆ, ಹೃದಯ ಮತ್ತು ಅಂಜೈನಾ, ಮುಂತಾದ ಕವನಗಳೆಲ್ಲಾ ನೈಜ ಜೀವನದಷ್ಟು ಬೋರು ಹೊಡೆಸಲು ಶಕ್ತವಾಗಿವೆ. ಇವರು ಬರೆದಿರುವ ''ಪಾಟ್ ಹೋಲ್ ವಿರಹ'' ಎಂಬ ಕವನದಲ್ಲಿ ಕವಿ ಬಾಲ್ಯದಿಂದ ತನ್ನ ಮನೆಯ ಮುಂದಿದ್ದ ಪಾಟ್‌ಹೋಲ್ ಜೊತೆಗೇನೇ ಬೆಳೆದು,


ಮಳೆಗಾಲದಲ್ಲಿ ಅದರಲ್ಲಿ ಕಾಗದದ ದೋಣಿ ಬಿಟ್ಟು, ಅದರ ಸಡಿಲವಾದ ಕಲ್ಲುಗಳಿಂದ ಮನೆಯ ಆಕ್ವೇರಿಯಂ ಅನ್ನು ಅಲಂಕರಿಸಿ, ಕೊನೆಗೆ ತನ್ನ ವೃದ್ಧಾಪ್ಯದಲ್ಲಿ, ರಸ್ತೆ ರಿಪೇರಿದಳದವರ ಕ್ರೂರ ವರ್ತನೆಯಿಂದ ಆ ಪಾಟ್‌ಹೋಲ್ ಮುಚ್ಚಿ ಹೋಗಿದ್ದನ್ನು ನೋಡಿ ಪ್ರಲಾಪಿಸುವ ಸಂದರ್ಭ ಪರಿಣಾಮಕಾರಿಯಾಗಿ ಚಿತ್ರಿತವಾಗಿದೆ.

ಪತ್ತೇದಾರಿ



ಈ ವರ್ಷದ ಅತ್ಯಂತ ಸ್ವಾರಸ್ಯಕರವಾದ ಪತ್ತೇದಾರಿ ಕಥೆ ಇದು ಎಂದು ಧೈರ್ಯವಾಗಿ ಹೇಳಬಹುದು. ಕಲ್ಯಾಣನಗರಿಯಲ್ಲೊಂದು ಖಜಾನೆ ಅದರಲ್ಲಿ ಯಾವ ವಸ್ತುವನ್ನಿಟ್ಟರೂ, ಕ್ಷಣಾರ್ಧದಲ್ಲಿ ಮಂಗಮಾಯ ಕ್ಲಾಸಿಕ್ ಕಂಪ್ಯೂಟರುಗಳು, ಬರ ಪರಿಹಾರನಿಧಿ, ವಿಶ್ವಬ್ಯಾಂಕಿನ ಸಾಲದ ಹಣ, ಕೋಜೆಂಟ್ರಿಕ್ಸ್ ಮಾಮೂಲು, ಇದೆಲ್ಲಾ ಹೀಗೆ ಅಂತರ್ಧಾನವಾಗುತ್ತಿದ್ದಾಗ ಖ್ಯಾತ ಪತ್ತೇದಾರ ಬಂಗಾರಕರ್, ಅಧಿಕಾರಿಗಳ ನೆರವಿಗೆ ಬಂದು ಈ ವಿಚಿತ್ರ ವ್ಯಾಪಾರದ ಗೋಜನ್ನು ಬಿಡಿಸುತ್ತಾನೆ. ತನ್ನ ಸೇವೆಗೆ ಪ್ರತಿಫಲವಾಗಿ ಆತ ಕೇಳಿದ ಫೀಸು.... ಅದನ್ನು ನೀವು ಪುಸ್ತಕದಲ್ಲೇ ಓದಬೇಕು.

ಜೀವನ ದರ್ಶನ



ಕೇವಲ ಇಪ್ಪತ್ತಮೂರು ವರ್ಷದ ತರುಣಿಗೆ ಇನ್ನೆಷ್ಟು ಲೋಕ ಜ್ಞಾನ ಇರುತ್ತೆ ಎಂದು ಮೂಗೆಳೆಯುವವರಿಗೆ ಲೇಖಕಿ ಮನಿಷಾ ಸವಾಲು ಹೊಡೆದು ಈ ಪುಸ್ತಕ ಬರೆದಿದ್ದಾರೆ. ಜೀವನದ ನಶ್ವರತೆ, ಲೋಕ ಸಂಗ್ರಹಕ್ಕಾಗಿ ನಲವತ್ತು ವರ್ಷದ ಪ್ರೌಢನೊಂದಿಗೆ ವಿವಾಹ, ದಂಪತಿಗಳ ಜ್ಞಾನದಾಹ, ತನ್ಮೂಲಕ ಹಿಂದೂ ಧರ್ಮದ ತಿರುಳಿನ ದರ್ಶನ ಇವೆಲ್ಲವನ್ನೂ ಈ ಪುಸ್ತಕದಲ್ಲಿ ಓದಬಹುದು. ಕಥಾನಾಯಕನ ಹೆಸರು ನಾನಾ ಪಾಟೇಕರ್ ಎಂದಿರುವುದು ಕೇವಲ ಕಾಕತಾಳೀಯ.

ಹೆಂಡತಿಯ ಕಾಗದ

O ಕೊಪ್ರು. ಶಿವಪ್ರಸಾದ್

ಪಾಪ ಅವಳು ಅವಳ ಅಮ್ಮನಿಗೆ ಕಾಗದ ಬರೆದು ನನಗೆ ಪೋಸ್ಟ್ ಮಾಡಲು ಕೊಟ್ಟಳು ಆಫೀಸಿಗೆ ಹೋಗುವಾಗ ಹಾಗೆ ಪೋಸ್ಟ್‌ಗೆ ಹಾಕಿಬಿಡಿ ಅಂದಳು.

ನನಗೋ ಮಾಮೂಲಿ ಮರೆಯೊ ಸ್ವಭಾವ. ಮರೆತುಹೋಯಿತು. ಸಾಯಂಕಾಲ ಮನೆಗೆ ಬಂದ ಮೇಲೆ ಕಾಫಿ ಕೊಡುತ್ತಾ ರೀ ಇವತ್ತು ನಮ್ಮಮ್ಮನಿಗೆ ಕಾಗದ ಪೋಸ್ಟ್ ಮಾಡಲು ಕೊಟ್ಟಿದ್ನಲ್ಲಾ ಹಾಕಿದ್ರಾ ಅಂದಳು.

ಇಲ್ಲಾ ಚಿನ್ನಾ ಮರೆತುಹೋಯಿತು ನಾಳೆ ಹಾಕ್ತೀನಿ ಅಂದೆ. ಹಾಗೆ ಮೂರು ದಿನ ಕಳೆದುಹೋಯಿತು. ಮೂರನೆ ದಿನ Officeಗೆ ಹೋಗುವಾಗ ಬಾಗಿಲವರೆಗೂ ಬಂದು ನನ್ನ ಬೀಳ್ಕೊಡುತ್ತಾ ರೀ... ಇವೊತ್ತು ಮರಿಬೇಡ್ರಿ ಮರಿದೇ ಪೋಸ್ಟ್ ಮಾಡೀಪ್ಪಾ ಅಂತ ಅಂದಳು.

ಸ್ವಲ್ಪ ದೂರ ನಡೆದು ಹೋದಮೇಲೆ ಹಿಂದುಗಡೆಯಿಂದ ನಮ್ಮ ಪಕ್ಕದ ಮನೆ ನಾರಾಯಣ ಅಯ್ಯಂಗಾರು ಬಂದು ಸಾರ್ ನಿಮ್ಮ ಹೆಂಡ್ತಿ ಬರೆದಿರೋ ಕಾಗದ ಪೋಸ್ಟ್ ಮಾಡೀಪ್ಪಾ ಮರೀಬೇಡಿ ಅಂದ್ರು. ಸರಿ ಸಾರ್ ಮಾಡ್ತಿನಿ ಅಂದು, ನಾನು ನೆನ್ನೆ ನಮ್ಮನೆಯಲ್ಲಿ ಮಾತನಾಡುತ್ತಿರೋದೆಲ್ಲೊ ಕೇಳಿಸಿರಬೇಕು ಅಂದ್ಕೊಂಡೆ. ಇನ್ನೂ ಸ್ವಲ್ಪ ಮುಂದೆ ಹೋದ ಮೇಲೆ ಹಿಂದುಗಡೆಯಿಂದ ಅಂಗಡಿ ಶೆಟ್ರು ಸಾರ್, ನಿಮ್ಮನೆಯವರ ಕಾಗದ ಪೋಸ್ಟ್ ಮಾಡಿಬಿಡಿ ಸಾರ್ ಅಂದ್ರು ನನಗೆ ಗಾಬರಿ ಆಯಿತು ನನ್ನ ಹೆಂಡತಿ ಅವರಿಗೂ ಹೇಳಿಬಿಟ್ಟಿದ್ದಾಳಲ್ಲಾ ಅಂತ Bus-Stopನಲ್ಲಿ ಕ್ಯೂ ನಿಂತಿದ್ರೆ ಹಿಂದುಗಡೆಯಿಂದ ಬಂದವರೊಬ್ಬರು ಸಾರ್ ನಿಮ್ಮೆಂಡತಿ ಕಾಗದ ಪೋಸ್ಟ್ ಮಾಡಿ ಸಾರ್ ಪಾಪ ಅಂದ್ರು. ಬಸ್‌ನಲ್ಲಿ ಕಂಡಕ್ಟರು ಟಿಕೇಟು ಕೊಡುತ್ತಾ ಸಾರ್ ನಿಮ್ಮ ಹೆಂಡ್ತಿಯವರ ಕಾಗದ ಪೋಸ್ಟ್ ಮಾಡಿ ಸಾರ್, ನನಗೋ ತಲೆ ಚಚ್ಚಿಕೊಳ್ಳೋಂಗಾಯಿತು. ಏನು ನನ್ನ ಹೆಂಡತಿ ಎಲ್ಲರಿಗೂ ಹೇಳಿಬಿಟ್ಟಿದ್ದಾಳಂತ.

ಅಂತೂ ಇಂತೂ Office ತಲುಪಿದೆ. ನನ್ನ ಸ್ನೇಹಿತರೆಲ್ಲಾ ನಿಮ್ಮ ಹೆಂಡತಿ ಕಾಗದ ಪೋಸ್ಟ್ ಮಾಡಿ ಸಾರ್ ಅಂದ್ರು.

ಜವಾನ ಬಂದು ಸಾರ್ ಸಾಹೇಬ್ರು ಕರೀತಾ ಇದ್ದಾರೆ ಸಾರ್ ಅಂದ. Chamberಗೆ ಹೋದೆ. ನೋಡಿ Mr.ಶಿವಪ್ರಸಾದ್ ಈ ಫೈಲ್‌ನ ಇವತ್ತೆ ಅಟೆಂಡ್ ಮಾಡಿಬಿಡೀಪ್ಪಾ ಅಂದ್ರು ಸರಿ ಸಾರ್ ಅಂದು ರೂಮಿನಿಂದ ಹೊರಟ್ರೆ ಅಂದಾಗೆ ನಿಮ್ಮ ಹೆಂಡತಿಯವರದು ಕಾಗದ ಪೋಸ್ಟ್ ಮಾಡಿಪ್ಪಾ ಅಂದರು. Yes ಸಾರ್ ಅಂದೆ.

ಸಾಯಂಕಾಲ ಮನೆಗೆ ಬಂದು ಹೆಂಡ್ತಿನ ತರಾಟಿಗೆ ತಗೋಬೇಕೂಂತ ಅಂದ್ಕೊಂಡು ಬಂದ್ರೆ ಮನೆ ಬೀಗ ಹಾಕಿತ್ತು ಪಕ್ಕದ ಮನೆಯಲ್ಲಿ ಬೀಗದ ಕೈ ಕೇಳೋಕೆ

ಹೋದೆ. ಅವರು ಬೇಗದ ಕೈ ಕೊಡುತ್ತಾ ನಿಮ್ಮ ಹೆಂಡತಿ ಕಾಗದ ಪೋಸ್ಟ್ ಮಾಡಿದ್ರಾ ಸಾರ್, ಅಂದ್ರು ಹಾಕಿದೆ ಸ್ವಾಮಿ ಥ್ಯಾಂಕ್ಸ್ ಅಂದೆ.


ಮನೆಗೆ ಬಂದು ಸಫಾರಿ ಕೋಟು ತೆಗೆದ್ರೆ ಅದರ ಹಿಂದೆ ''ಕಾಗದ ಪೋಸ್ಟ್ ಮಾಡಲು ದಯವಿಟ್ಟು ಜ್ಞಾಪಿಸಿ ಹೆಂಡತಿ'' ಅಂತ ಚೀಟಿ ಅಂಟಿಸಿದ್ದಳು ನನ್ನ ಮುದ್ದು ಹೆಂಡತಿ.


☺

ಶಿಕ್ಷಣ ವ್ಯವಸ್ಥೆ

- ಮಗು. ಬಿರಾದಾರ.

ಪ್ರಾಥಮಿಕ ಶಾಲೆಗಳೆಲ್ಲ
ಕುರಿದೊಡ್ಡಿಯಾದರೆ
ಪ್ರೌಢಶಾಲೆಗಳೆಲ್ಲ
ಕೊಂಡವಾಡೆ
ಕಾಲೇಜದಂಗಳವೊ
ಅಭಯಾರಣ್ಯ
ವಿಶ್ವವಿದ್ಯಾಲಯವು
ದಟ್ಟ ಶೀಗರ ಕಾಡು
ಇದರಲ್ಲಿಯೆ ಮೂಡುತ್ತಾವೆ
ಸಾಕ್ಷರತೆ-ಗೆ ಕೋಡು
ಇದು ನಮ್ಮ ಶಿಕ್ಷಣದ ಪಾಡು.


ತೋಳ ಮತ್ತು ಕುರಿಮರಿ
ಒಮ್ಮೆ ತೋಳನಿಗೆ ಕುರಿಮರಿಯನ್ನು ತಿನ್ನಬೇಕೆಂಬ ಆಸೆಯಾಯಿತು
ಮಿಸ್. ಕು. ಮರಿ. ನೀವು ತುಂಬಾ ಚೆನ್ನಾಗಿ ಹಾಡ್ತೀರಂತೆ. ನಮ್ಮ ಕ್ಲಬ್ಬಿಗೆ ಬಂದು ಭಾವಗೀತೆ ಹಾಡಿದ್ರೆ ತುಂಬಾ ಆಭಾರಿ
ಆಗಲಿ...
ಬ್ಬಾ... ಬ್ಬಾ.


ಮಾದಕ ಪಾನೀಯಗಳ ಜಾಗದಲ್ಲಿ ಕ್ಯಾಬರೇ ನಡೆಸ್ತೀಯ ?.... ನಿನ್ನನ್ನ ದಸ್ತಗಿರಿ ಮಾಡಿದ್ದೇನೆ ನಡಿ ಅಡಿಗೆಮನೆಗೆ,
ಮೊನ್ನೆ ಸದಾಶಿವ ನಗರದ ಕ್ಲಬ್ಬ್‌ನಲ್ಲೂ ಹೀಗೆ ಆಗಿತ್ತಂತೆ
ಹೊಟ್ಟೆತುಂಬಾ ಸಂಗೀತ ಕೇಳಿದ ಹಾಗಾಯ್ತು
ನೀತಿ:- ಗಾಯನ ಮಾಡಿದ್ರೆ ಗಾಯ ಆಗೋದು ಖಂಡಿತ,
ಕಥೆ:- ಶಿವು
ಚಿತ್ರ:- ಬಾಗಾರು

ದೋಸೆ ಹೋಯ್ತು ತಮಟೆ ಬಂತು ಡುಂ ಡುಂ ಡುಂ!

೦ ಶ್ರೀ ಜಿ.ವಿ. ಅರುಣ

ಬೇರೆ ಬ್ರ್ಯಾಂಚ್‌ನೋನಾದರೂ ನಮ್ಮ ಆಫೀಸಿನಲ್ಲೆ ಅತ್ಯಂತ ಕಡಿಮೆ ಮಾತನಾಡೋನು ಅಂದ್ರೆ ಅವನೇ. ಯಾರ ಹತ್ರಾನೂ ಕಾಡು ಹರಟೆ, ಅದು - ಇದು ಟೈಂಪಾಸ್ ಇತ್ಯಾದಿ ಯಾವುದಕ್ಕೂ ಬರ್ತಿರಲಿಲ್ಲ. ಬೇಕಾಗಿದ್ದುದಕ್ಕಿಂತ ಒಂದಕ್ಷರ ಹೆಚ್ಚು ಆಡ್ತಿರಲಿಲ್ಲ. ಅಂಥವನು ನನ್ನ ಟೇಬಲ್‌ಗೇ ಬಂದು ''ಸಾರ್, ನಿಮ್ಮ ಹತ್ರ ಸ್ವಲ್ಪ ಮಾತಾಡ್ಬೇಕಾಗಿತ್ತು.'' ಅಂದಾಗ ನನಗೆ ಆಶ್ಚರ್ಯವಾಗಿತ್ತು.

'ಬನ್ನಿ, ಬನ್ನಿ ...ಕೂತ್ಕೊಳ್ಳಿ' ಅಂತ ಹೇಳಿ, 'ಏನು ಸಮಾಚಾರ?' ಅಂದೆ. ಅವನು ಏನು ನನ್ಹತ್ರ ಮಾತಾಡ್ಬೇಕಾಗಿತ್ತೋ ಅದನ್ನು ಕೇಳಲು ನನಗೆ ಒಂಥರಾ ಕುತೂಹಲ, ಕಾತರ ಎಲ್ಲಾ ಒಟ್ಟಿಗೆ ಆಗಿತ್ತು.

'ಸಾರ್...ನಿಮ್ಹತ್ರ ಕ್ಯಾಮರ ಇದೆಯಾ...? ಅಂತ ಕುಳಿತುಕೊಂಡವನು ಕೇಳಿದ.

'ಇದೆ...ಯಾಕೆ?' ಅಂತ ನಾನು ಕೇಳಿದ್ದಕ್ಕೆ ಹಿಂದಿ ಮಾತಾಡೊ ಅವನು ಹೇಳಿದ್ದನ್ನೇ ಕೆಳಗೆ ಸಂಕ್ಷಿಪ್ತವಾಗಿ ವಿವರಿಸಿದ್ದೇನೆ. ''ಸಂಕ್ಷಿಪ್ತವಾಗಿ ವಿವರಿಸುವುದು'' ಎಂಬ ವಿರೋಧಾಭಾಸದ ಪದಪುಂಜ EXPLAIN BRIEFLYಎಂಬುದರ ಅನುವಾದದಂತೆ ಕಂಡರೂ ಅದಕ್ಕೆ ನಾನು ಕೊಡುವ ಅರ್ಥ ಹೀಗಿದೆ: ''ಬೇರೆಯವರು ಹೇಳಿದ್ದನ್ನು ನಮಗೆ ಬೇಕಾದ ಕಡೆ ಹಿಗ್ಗಿಸಿ, ಬೇಡದಕಡೆ ಕುಗ್ಗಿಸಿ ಮತ್ತೆ ಹೇಳುವುದು.''

ಇದು ಆಲಿಫ್ ಲೈಲಾತರಹಾನೋ, ಹಾತಿಮ್‌ತಾಯ್‌ತರಹಾನೋ ಕತೆ ಒಳಗೆ ಕತೆ ಅಂತ ಭಾವಿಸಿಕೊಂಡು ಓದಿದರೆ ಒಳ್ಳೆ ಕಿಕ್ ಕೊಡುತ್ತೆ. (AFTER ALL YOU DESERVE THE BEST !)

ಅವನು ಹೇಳಿದ ಕತೆ:-

'ರೀ ....ನಿಮ್ಗೇ ಹೇಳ್ತಿರೋದು .... ಆದೆಷ್ಟು ಸಲಿ ಮದ್ರಾಸ್ ಹೋಗಿದೀರಿ ... ಆ ಬರ್ಮಾಬಜಾರ್‌ನಿಂದ ಟೂ ಇನ್‌ವನ್ ತನ್ನಿ ಅಂತ ಪ್ರತಿಸಲಿ ನಾ ಹೇಳೋದು ....ನೀವು ಮರೆಯೋದು ... ಈ ಸಲಿ ತರಲಿಲ್ಲ ಅಂದ್ರೆ ನಿಮ್ಮನ್ನ ಮನೆ ಒಳಗೆ ಸೇರಿಸೊಲ್ಲ...'' ರೂಲಿಂಗ ಕೊಟ್ಟಾಗಿತ್ತು.

ವೀರಪ್ಪನ್ನೂ ಪಿರ್‌ಬಾಕರನ್ನೂ ಮೊದಲ್ಗೊಂಡು ಎಲ್ಲಾ ಟೆರರಿಸ್ಟುಗಳೂ ಅಲ್ಟಿಮೇಟಂ ಅನೌನ್ಸ್ ಮಾಡಿ ಈಗ ಮನೆ ಮಂದಿ ಎಲ್ಲಾ ಅಂದ್ರೆ, ಪ್ರೀತಿಯಿಂದ

''ಇನ್ನೊಂದು ಲೋಟ ಬಿಸಿಕಾಫಿ ಕೊಡ್ಲಾ...'' ''ಇನ್ನೊಂದು ಮಿಳ್ಳೆ ತುಪ್ಪ ಹಾಕ್ಕೊಳ್ಳಿ್ರೀ...'' ಮುಂತಾಗಿ ಹೇಳ್ತಾ ಇದ್ದೋರೆಲ್ಲ ಅಲ್ಟಿಮೇಟಂ ಕೊಡೊತರಹ ಆಗೋಗಿದ್ದಾರೆ.

'ಲೇ.... ನಿಂಗೆ ಗೊತ್ತು ಕಣೆ ನನಗೆ ಅದನ್ನೆಲ್ಲ ಖರೀದಿ ಮಾಡೋಕ್ಕೆ, ಆ ಬೇರೆ ಭಾಷೇಲಿ ಮಾತಡೋರ ಹತ್ತಿರ ಚೌಕಾಸಿ ಮಾಡೋಕ್ಕೆ ಆಗೋದಿಲ್ಲ ಅಂತ. ಅದೂ ಅಲ್ದೆ ಟೂ ಇನ್‌ವನ್ ನ ಸರಿಯಾಗಿದೆಯೆ ಅಂತ ಹೇಗೆ ಕಂಡುಹಿಡಿಯೋದು?... ನೀನೇ ಇಲ್ಲೆ ಎಲ್ಲಾದ್ರೂ ಹೋಗಿ ತಂದುಬಿಡಬಾರ್ದನೆ?.. ಒಂದು ನೂರು ರೂಪಾಯಿ ಜಾಸ್ತಿ ಆದರೂ ಪರವಾಗಿಲ್ಲ...?

ಊ ಹೂಂ, ಒಪ್ಪಬೇಕಲ್ಲ.... ''...ನಿಮಗೆಷ್ಟು ಹೇಳಿದ್ರೂ ಅಷ್ಟೆ..... ನಾ ನೋಡಿರೋ ಮದ್ರಾಸಿಗಳ ಮನೇಲಿ ಇರೋ ಟೂ ಇನ್‌ವನ್‌ಗಳೆಲ್ಲಾ ಬರ್ಮಾಬಜಾರ್‌ದೇ. ಅದು ಇಲ್ಲಿ ತರಹ ಅಲ್ಲ. ಒರಿಜಿನಲ್ ಬರ್ಮಾಬಜಾರ್. ನಾನು ನಿಮಗೆ ಮಾಡೆಲ್ ನಂಬರ್ರೂ, ಮೇಕು ಎಲ್ಲ ಕೊಡ್ತಿನಿ. ಮಾರೋನು ಎಷ್ಟರಲ್ಲಿ ಪ್ರಾರಂಭಿಸಿ ಎಲ್ಲಿವರೆಗೆ ಇಳಿಸ್ತಾನೆ ಅಂತಲೂ ಬರೆದುಕೊಡ್ತೀನಿ.....ಎಷ್ಟರ ಮೇಲೆ ಕೊಡಬೇಡಿ ಅಂತಲೂ ಬರೆದುಕೊಡ್ತೀನಿ .... ಇನ್ನೇನು ನಿಮ್ಗೆ?''

ಸರಿ ಬರ್ಮಾ ಬಜಾರ್‌ನಲ್ಲಿ ಪ್ರತ್ಯಕ್ಷ ಆದೆ. ಜೇಬಿನಿಂದ ಚೀಟಿ ತೆಗೆದು ಟೂ ಇನ್‌ವನ್ ಅಂತ ಕೇಳುತ್ತಿದ್ದ ಹಾಗೆ ಎಳೆದುಕೊಂಡು ಹೋಗಿ ಒಂದು ಅಂಗಡಿ ಮುಂದೆ ನಿಲ್ಲಿಸಿದರು. ಅವನಿಗೆ ಮಾಡೆಲ್-ಮೇಕ್ ಹೇಳುತ್ತಿದ್ದ ಹಾಗೆ, ಅವನ ಭಾಷೆಯಲ್ಲಿ 'ಬೆಸ್ಟಮೇಕು-ಬೆಸ್ಟಮಾಡೆಲ್ಲು ...' ಅಂತ ಹೇಳಿ ಮೇಲೆ ಇದ್ದ ಪೆಟ್ಟಿಗೆ ತೋರಿಸಿದ. ನಾನು ಹೇಳಿದ್ದು ಮೇಕು-ಮಾಡೆಲ್ಲು ಅದರ ಮೇಲೆ ಅಚ್ಚಾಗಿತ್ತು. ಅಂಗಡಿಯೋನು ಟೂ ಇನ್‌ವನ್ ಆಚೆ ತೆಗೆದ. ಇವಳು ಹೇಳಿದ ಹಾಗೆ ಮೇಲಿನ ಬೆಲೇಲೇ ಪ್ರಾರಂಭಿಸಿದ. ನಾನು ಸೀದ ಇವಳು ಹೇಳಿದ್ದ, ಅಲ್ಲ ಬರೆದುಕೊಟ್ಟಿದ್ದ ಕಡಿಮೆ ಬೆಲೆ ಹೇಳಿದೆ. ಅಂಗಡಿಯವನ ಕಣ್ಣು ಮಿರುಗಿತು. ಅವನ ಭಾಷೇಲೇ ''ಸಾರ್! ನೀವೊಬ್ಬರೆ ಸಾರ್ ಚೌಕಾಸಿ ಮಾಡದೆ ಸರಿಯಾದ ಬೆಲೆ ಕೇಳಿದ್ದು.....ನನಗೆ ಎಷ್ಟು ಸಂತೋಷ ಆಗಿದೆ ಅಂದ್ರೆ ಇನ್ನೂ ನೂರು ರೂಪಾಯಿ ಕಮ್ಮಿ ಮಾಡ್ಕೊಂಡು ಕೊಡ್ತಿನಿ ಸಾರ್....'' ಅಂತ ಹೇಳಿ ನನ್ನ ಕೈಗೆ ಟೂ ಇನ್‌ವನ್ ಕೊಟ್ಟ. ಸಂತೋಷದಿಂದ ನಾನು ಎರಡುಸಾವಿರದ ಒಂಬೈನೂರು ರೂಪಾಯಿ ತೆಗೆದುಕೊಟ್ಟೆ. ಅವನು ಕಣ್ಣಿಗೆ ಒತ್ತಿಕೊಂಡು ಜೇಬಿಗೆ ಬಿಟ್ಟು ತಲೆ ಆಡಿಸಿದ.

'ಅಲ್ಲಪ್ಪ ಹಾಕಿ ತೋರಿಸು' ಅಂದೆ

''ಏನ್ ಸಾರ್ ನಿಮ್ಮ ಮುಂದೇನೆ ಒರಿಜಿನಲ್ ಪ್ಯಾಕಿಂದ ತೆಗೆದೆ! ಆಗ್ಲಿ ಕರೆಂಟ್ ಆನ್ ಮಾಡ್ತಿನಿ ತಾಳಿ....' ಅಂತ ಅಂಗಡಿ ಹಿಂದೆ ಹೋದ. ಅವನು ಮತ್ತೆ ವಾಪಸ್ ಬರುತ್ತಿದ್ದಂತೆ ದೂರದಿಂದ ಯಾರೋ 'ಪೋಲೀಸ್....ಪೋಲೀಸ್...' ಅಂತ ಕೂಗಿಕೊಂಡು ಓಡಿಬಂದ. ಅಂಗಡಿಯವನು 'ಸಾರ್ ಈ ಕಡೆ ರೋಡ್‌ನಲ್ಲಿ

ಹೋರಟುಹೋಗಿ ಸಾರ್...ಅಲ್ಲೇ ಆಟೋರಿಕ್ಷ ಸಿಗುತ್ತೆ. ಪೋಲೀಸ್‌ನೋನು ಬಂದ್ಬಿಟ್ರೆ ನಿಮ್ಮನ್ನೇ ಹಿಡಿದುಕೊಳ್ಳೋದು....ಸ್ಮಗಲ್ಡ್ ಗೂಡ್ಸ್ ಹಿಡಿದುಕೊಂಡಿದ್ದೀರಿ ಅಂತ...ತಗೊಳ್ಳಿ ಈ ಹೊಸ ಕ್ಯಾಸೆಟ್ ನಿಮ್ಗೇ ಫ್ರೀ....!'' ಅಂತ ಹೇಳಿ ಬೇಗ ನನ್ನ ಸಾಗಿಸಿದ.

ಪೋಲೀಸ್‌ನೋರ ಕೈಯಿಂದ ತಪ್ಪಿಸಿಕೊಂಡ್ರೆ ಸಾಕು ಅಂತ ಬೇಗ ಬೇಗ ಬಂದೆ. ಸದ್ಯ ಆಟೋ ಸಿಕ್ತು, ಪಾರಾದೆ.

ಮನೆಗೆ ಬಂದ ಮೇಲೆ ಟೂ ಇನ್‌ವನ್ ನೋಡಿ ಅವಳ ಪ್ರೀತಿ ಒನ್‌ಟುಟೂ ಆಗೋಯ್ತು! ನನಗೆ ಸ್ವರ್ಗದ ಮೇಲೆ ಮೂರು ಗೇಣಲ್ಲಿ ನಿಂತುಕೊಂಡ ಹಾಗೆ ಆಯ್ತು! ನೂರು ರೂಪಾಯಿ ಉಳಿಸಿದ್ದಲ್ದೆ ಒಂದು ಫ್ರೀ ಕ್ಯಾಸೆಟ್ ಬೇರೆ ಸಿಕ್ತು ಅಂತ ಹೇಳಿದ್ಮೇಲೆ, ನನ್ನ ವ್ಯವಹಾರದ ಟ್ಯಾಕ್ಟಿಕ್ಸ್ ಹೊಗಳಿದ್ದೂ ಹೊಗಳಿದ್ದೆ. ಅವತ್ತು ಬೆಳಿಗ್ಗೆ ಯಥಾ ಪ್ರಕಾರ ಕರೆಂಟ್ ಇರಲಿಲ್ಲ. ನಾನು ಆಫೀಸ್‌ಗೆ ಹೋಗಿ ಬಂದೆ. ಬೆಳಗಿದ್ದ ಸಂತೋಷದ ವಾತಾವರಣ ಮನೇಲಿ ಮಾಯವಾಗಿತ್ತು. ಇವಳ ಮುಖ....ಬೇಡ ಬಿಡಿ. ಎಷ್ಟಾದರು ಅವನು ನನ್ನವಳು, ಬಲೂನ್ಮುಖಿಯ ವಿವರಣೆ ಯಾಕೆ? ಎಷ್ಟು ಹೊತ್ತು ಆ ಉಸಿರು ಕಟ್ಟಿಸುವ ವಾತಾವರಣದಲ್ಲಿ ಇರುವುದು. ಸ್ವಲ್ಪ ಆಕ್ಸಿಜನ್ ಕೊಡುವ ಪ್ರಯತ್ನ ಮಾಡ್ದೆ. ಆದ್ರೆ ಅದರಿಂದ ಆಟಂಬಾಂಬ್ ಸಿಡಿಯುತ್ತೆ ಅಂತ ಗೊತ್ತಾಗಲಿಲ್ಲ.

'....ನೋಡಲ್ವೇನ್ರಿ ತರೋದು ... ಅವನು ಕೊಟ್ಟ ನೀವು ತಂದ್ರಿ....ಚೆಕ್ ಮಾಡಿದ್ರ...?'

ಮುಂದಿನ ಸಲಿ ಮದ್ರಾಸಿಗೆ ಹೋದಾಗ ಆ ಡೂಪ್ಲಿಕೇಟ್ ಟೂ ಇನ್‌ವನ್ ನ ಒರಿಜಿನಲ್ ಬರ್ಮಾಬಜಾರ್‌ಗೆ ತೆಗೆದುಕೊಂಡು ಹೋದೆ. ಆ ಅಂಗಡಿ ತೆಗೆದಿತ್ತು; ಅಂಗಡಿಯವನು ಇರಲಿಲ್ಲ. ನನ್ನ ಕೈಲಿದ್ದುದನ್ನು ನೋಡಿ ಇನ್ನೊಬ್ಬ 'ಏನಾಗ ಬೇಕಿತ್ತು ಸಾರ್.....?' ಅಂತ ಕೇಳಿದ ನನ್ನ ವ್ಯಥೆಯ ಕಥೆ ಅವನಿಗೆ ವಿವರವಾಗಿ ತಿಳಿಸಿದೆ. ಅವನು ಲೊಚಗುಟ್ಟಿದ.... ''ಎಲ್ಲೋ ಮಿಸ್ಟೇಕ್ ಆಗೋಗಿದೆ ಸಾರ್... ಇವನು ಯಾವತ್ತೂ ಡೂಪ್ಲಿಕೇಟ್ ಮಾರೋದಿಲ್ಲ. ಈಗ ಹೊಸ ಮಾಲು ತರೋಕ್ಕೆ ಸಿಂಗಪುರ್‌ಗೆ ಹೋಗಿದ್ದಾನೆ. ಅಂಗಡಿ ಎಲ್ಲ ಖಾಲಿ ಆಗ್ಹೋಗಿದೆ. ಹೋಗ್ಲಿ ಸಾರ್ ನಿಮಗ್ಯಾಕೆ ಲಾಸ್ ಆಗಬೇಕು. ಅಲ್ಲದೆ ಈ ಡೂಪ್ಲಿಕೇಟ್ ಇಟ್ಟುಕೊಂಡು ಎಷ್ಟುಸಾರಿ ಓಡಾಡ್ತೀರಿ? ನಾನು ಇದನ್ನ ಅಂಗಡಿಯೋನಿಗೆ ವಾಪಸ್ ಮಾಡ್ತಿನಿ; ಆದ್ರೆ ನಿಮಗೆ ಹಣ ಕೊಡೋಕೆ ನನ್ನ ಹತ್ರ ಹಣ ಇಲ್ಲ. ಅದಕ್ಕೆ ಬದಲು ನೋಡಿ ಈ ಇಪ್ಪತ್ತು ಕಲರ್ ಫಿಲ್ಮ್ ಕೊಡ್ತಿನಿ. ಇದಕ್ಕೆ ಮಾರ್ಕೆಟ್‌ನಲ್ಲಿ ಎರಡೂವರೆಸಾವಿರ ಆಗುತ್ತೆ. ನೋಡಿ ನಂಬಿಕೆ ಮುಖ್ಯ. ನೀವು ತಿರುಗಿ ಇಲ್ಲಿಗೆ ಬಂದು ಮುಂದಿನಸಲಿ ಒರಿಜಿನಲ್ ಟೂ ಇನ್ ವನ್ ಕೊಂಡುಕೊಳ್ಳೋರಂತೆ. ಈ ಕಲರ್ ಫಿಲ್ಮ ಈಗ ಶಾರ್ಟ ಸಪ್ಲೈ ಇದೆ. ನಿಮ್ಮೂರಲ್ಲಿ ಹತ್ತು ನಿಮಿಷದಲ್ಲಿ ನೀವೇ ಮಾರಿಬಿಡಬಹುದು. ನೋಡಿ ನನ್ನ ಹತ್ತಿರ

ಉಳಿದಿರೋದೆ ಇಷ್ಟು.'' ಅಂತ ಹೇಳಿದ. ನಾನು ಯೋಚನೆ ಮಾಡುವಷ್ಟರಲ್ಲಿ ಅದಲು ಬದಲು ಮಾಡಿಕೊಂಡು ನನ್ನನ್ನ ಆಟೋದಲ್ಲಿ ಕೂರಿಸಿಬಿಟ್ಟಿದ್ದ.


ಸರಿ ಇಷ್ಟಾದರೂ ಸಿಕ್ಕಿತಲ್ಲ, ಪಾಪ ಒಳ್ಳೆ ಮನುಷ್ಯ ಅಂತ ಅಂದುಕೊಂಡು ಊರಿಗೆ ಬಂದೆ. ನಾನು ಕಲರ್ ಫಿಲ್ಮ ತಂದದ್ದು ನೋಡಿ ನನ್ನ ಮನೆಯೋಳು ತಲೆ ತಲೆ ಚಚ್ಚಿಕೊಂಡಳು.....'ಅಲ್ರಿ...ಏನಾಗಿದೆ ನಿಮಗೆ!?.... ಇದನ್ನ ಉಪಯೋಗಿಸೋಕ್ಕೆ ಕ್ಯಾಮರಾ ಬೇಡ್ವೇನ್ರಿ ನಮ್ಮ ಹತ್ರ ಸರಿಯಾದ ಟೂ ಇನ್ ವನ್ ಕೂಡ ಇಲ್ಲ; ಇನ್ನು ಕ್ಯಾಮರ ಎಲ್ಲಿಂದ ಬರ್ಬೇಕ್ರಿ...?' ಅಂದ್ಲು. ಪಾಪ ಅವಳು ಹೇಳಿದ್ದೂ ನಿಜ ಅನ್ನಿ.

ಸರಿ ಕಲರ್ ಫಿಲ್ಮ್ ತೆಗೆದುಕೊಂಡು ಸ್ಟುಡಿಯೋಗೆ ಹೋದೆ, ಅವ್ರೇನಾದ್ರೂ, ಬಲ್ಕ್ ಪರ್ಚೇಸ್ ಮಾಡ್ತಾರೇನೋ ಅಂತ. ಅವರು ಹಿಂದು-ಮುಂದು ತಿರುಗಿಸಿ, 'ಏನ್ರಿ ಎಲ್ಲಕ್ಕೂ ಕೊನೆ ದಿನಾಂಕ ಮುಗಿದು ಆರು ತಿಂಗಳು ಆಗ್ಹೋಗಿದೆಯಲ್ರಿ....ನಮಗೆ ಬೇಡ. ನೀವೇ ಉಪಯೋಗಿಸಿ....ಪಿಕ್ಚರ್ ಬಂದ್ರೆ ನಿಮ್ಮ ಅದೃಷ್ಟ' ಅಂದ್ರು.

ಅದಕ್ಕೆ ನಮ್ಮ ಆಫೀಸ್‌ನಲ್ಲಿ ಯಾರ ಯಾರ ಹತ್ರ ಕ್ಯಾಮರ ಇದೆಯೋ ಅವರಿಗೆಲ್ಲ ಒಂದೊಂದು ರೋಲ್ ಕೊಟ್ಟು ಹೋಗೋಣ ಅಂತ ಬಂದೆ...ನೀವೆ ಫಸ್ಟ್ ಗಿರಾಕಿ! ಫೋಟೋ ತೆಗಿರಿ, ಚೆನ್ನಾಗಿ ಬಂದ್ರೆ ಆಮೇಲೆ ದುಡ್ಡು ಕೊಡಿ'' ಅಂತ ಹೇಳಿ ಟೇಬಲ್ ಮೇಲೆ ಒಂದು ರೋಲ್ ಇಟ್ಟ.

ನನಗೆ ಅಯ್ಯೋಪಾಪ ಅನ್ನಿಸ್ತು. ಅವನಿಗೆ ಹೇಳಿದೆ 'ನನಗೆ ಬೇಕಾದೋರು ಬೇಕಾದಷ್ಟು ಜನ ಇದ್ದಾರೆ. ಅವರಿಗೆಲ್ಲ ತಿಳಿಸ್ತೀನಿ. ಯಾರು ಬರ್ತಾರೋ ಅವರಿಗೆ ತಗುಲಿಹಾಕೋಣ''.

ನಿಮಗೆ ಈಗ ತಿಳಿಸಿದೀನಿ. ಫಸ್ಟ್ ಕಂ ಫಸ್ಟ್ ಸರ್ವ್ಡ್. ಆದಷ್ಟು ಬೇಗೆ ಬಂದು ಫಿಲ್ಮ ತೆಗೆದುಕೊಂಡು ಹೋಗಬಹುದು.



''ಕಾವೇರಿ ನಾಲ್ಕನೇ ಹಂತ ಆದ್ಮೇಲೆ ದಿನಾ ಸ್ನಾನ''

ಬುಳ್ಳನ ಬುರುಡೆ

○ ಬುಳ್ಳ

(ಅರ್ಧ ಶತಮಾನದ ಹಿಂದೆ, ಅಂದರೆ ನಲವತ್ತರ ದಶಕದಲ್ಲಿ, ಕೊರವಂಜಿ ಲೇಖಕ ಬುಳ್ಳ ಬರೆದ ಕವನವಿದು. ಮೈಸೂರು ಮಹಾರಾಜಾ ಕಾಲೇಜಿನ ಅಂದಿನ ವಾತಾವರಣವನ್ನು ಯಥಾವತ್ತಾಗಿ ಚಿತ್ರಿಸುವ ಈ ಅಣಕು ಗೀತೆಗೆ ಖ್ಯಾತ ವ್ಯಂಗ್ಯ ಚಿತ್ರಕಾರ ಶ್ರೀ ಆರ್.ಕೆ. ಲಕ್ಷ್ಮಣ್ ಅವರ ಚಿತ್ರಗಳ ಸಂಯೋಜನೆ ದೊರೆತಿದೆ. ಲಕ್ಷ್ಮಣ್ ಆಗಿನ್ನೂ ವಿದ್ಯಾರ್ಥಿ. ಹಳೆಯ ತಲೆಮಾರಿನ ಬರಹಗಾರರ ಕೃತಿಗಳನ್ನು ಇಂದಿನ ಪೀಳಿಗೆಯ ಲೇಖಕರಿಗೆ ಪರಿಚಯಿಸುವ ಸರಣಿಯಲ್ಲಿ ಇದು ಮೊದಲ ಕೊಡುಗೆ)

ಬಡಾಯಿ ಬುಳ್ಳನು ಬುರುಡೆ ಹೊಡೆದರೆ
ಕೃತಯುಗ ಕಲಿಯುಗ ವಾಗುವುದು,
ತ್ರೇತಾ ದ್ವಾಪರ ಯುಗದಲಿ ನಡೆಯದ,
ನೋಡದ, ಚಿತ್ರ ವಿಚಿತ್ರವು ತೋರುವುದು.

ಬುರುಡೆ ಬುಳ್ಳನ ಬಡಾಯಿ ಎಂದರೆ
ಸಡಗರದಿಂದಲಿ ಕೇಳುವರು,
ಪಂಡಿತ ಪಾಮರರೆಲ್ಲರು ಕೂಡ
ಕಣ್ ಬಾಯ್ಬಿಡುವರು ಬೆಪ್ಪಾಗಿ.

ತಡೆಬಡೆಯಿಲ್ಲದೆ ಹೊರಡುವ ವಾಗ್ಝರಿ
ಹುಡುಗರನೆಲ್ಲರ ಕುಣಿಸುವುದು,
ಮುದುಕರ ಮೈಯಲಿ ರೋಮಾಂಚ
ಮಿಂಚಿನಹೊಳೆ ತುಳುಕಾಡುವುದು,
ಆ ವೈಕುಂಠವೆ ತೋರುವುದು,
ಈ ಮೈಸೂರಿನಲಿ
ನಮ್ಮೀ ಕಾಲೇಜಿನಲಿ,
ಚಿತ್ರ ವಿಚಿತ್ರವು ಕಾಣುವುದು,

ಮೈ ನವಿರೇಳುವುದು!
ಸ್ಟಾಫಿನ ರೂಮಿನ ಕೂಟದಲಿ
ಹೊಳೆಯುವ ಗಾಜಿನ ಪ್ಲೇಟಿನಲಿ,
ತಾಗುವ ಸ್ಪೂನಿನ ಸಂಘಟ್ಟಣೆಯಲಿ
ಕೇಶವ, 'ನಾಕ'ರ ಚೀತ್ಕಾರದಲಿ,
ಸಂಸ್ಕೃತ, ಕನ್ನಡ ಪಂಡಿತ ಮಂಡಲಿ
ಸೈರಣೆ ಕಟ್ಟನು ಕಿತ್ತೊಗೆದು,
ಅತಿ ಕೋಪದಲಿ,
ಬಲು ಜಂಭದಲಿ,
ಕಾಫಿಯ ಕುಡಿಯದೆ ಕಂಗೆಟ್ಟು,
''ನೀಚರು'', ಎಂಬರು ತಾಪದಲಿ,
ಹಸಿವನು ತಡೆಯದೆ ಹಾಹಾರವದಲಿ
''ಭ್ರಷ್ಟರು'', ಎನ್ನುತ ಶಪಿಸುವರು!




ನೋಡಿರಿ, ಯೂನಿಯನ್ ಹೋಟಲಲಿ
ನುಗ್ಗುವ ಹುಡುಗರ ಗುಂಪಿನಲಿ,
'ಮ್ಯಾಚ'ಲಿ ಗೆದ್ದಿ ಹರಾಟೋಪದಲಿ,
'ಕಾರ'ಲಿ ಬರುತಿಹ ಸೋಮಾರಿಗಳು
ಹೊಡೆಯುವ 'ಹಾರ್ನ' ಶಬ್ದದಲಿ,
ಕಿವಿ ಬಿರಿಯುವುದು,
ಎದೆಯೊಡೆಯುವುದು!

ಕೇಳಿರಿ, ಪಾರ್ಥನ 'ಥಿಯರಿ'ಯನು
'ಗೂಗ್ಲಿ ಬೌಲಿಂಗ್' ರೀತಿಯನು,
ಬೋಧಿಸುವನು ನಿರ್ಭೀತಿಯಲಿ,
ಬ್ಯಾಟನು ಬೀಸದೆ ಮ್ಯಾಚಿನಲಿ,
ಕ್ಯಾಚನು ಹಿಡಿಯದೆ ಕೈಯಿನಲಿ,
'ಎಲ್.ಬಿ. ಡಬ್ಲ್ಯು.' ರೀತಿಯನು,

'ಓಟ್ ಔಟ್' ನೀತಿಯನು,
'ನಾಟ್ ಔಟ್' ರೀತಿಯನು,
ಸ್ಪೋರ್ಟ್ಸ್ ಗೀತೆಯನು,
ಹಾಡೀ ಹಾಡೀ ನಲಿಯುವನು!

ಸೈಕಲ್ ತುಳಿಯುತ ಬರುವವನಾರು!?
ಶುಭ್ರದ ಖಾದಿಯ ಉಡುಪನು ಧರಿಸಿ,
ಹೊಳೆಯುವ ಕ್ರಾಪಿನ ಬೈತಲೆ ಬಾಚಿ,
ತುಂಬಿದ ಆಕೃತಿ,
ಮಂದಹಾಸದಲಿ,
ಮಂದ ಗಮನದಲಿ,
ಅಟ್ಟಹಾಸದಲಿ ಬರುತಿಹನು,
ಊರಿನ ನಾನಾ ಮೂಲೆಯಲಿ
ನಡೆಯುವ, ನಡೆಯದ, ಸುದ್ದಿಯನು
ಕಂಡಂತೆಯೆ ಹೇಳುವನು,
ಹರಟೆಯ ಹೊಡೆಯುವ ಮಾತಿನ ಮಲ್ಲನು,
ಮಂಗಳಗೌರಿಯ ಹೋಲುವನು!



ಆಹಾ, ನೋಡಲ್ಲಿ,
ಕಾಲೇಜ್ ಲೈಬ್ರೆರಿ ಬಾಗಿಲಲಿ,
ಮುಗುಳ್ನಗೆ ಬೀರುತ ನಿಂದಿಹಳು!
ನುಣ್ಣನೆ ಕೆನ್ನೆಯ ಚೆಂದುಟಿಯವಳು,
ಅತಿ ಗಂಭೀರಳು, ಬಲು ಚೆಲುವು!
ಕನ್ನಡ ನಾಡಿನ ಹೆಮ್ಮೆಯ ಮಗಳು,
ಮುದ್ದಿನ ಸರಸತಿ, ಲಜ್ಜೆಯ ಲಕುಮಿ!
ಚಿಮ್ಮುವ ಸೊಬಗಿನ ಚೆಲುವನು ನೋಡಿ,
ಕಣ್ಣೊಡೆಯುವುದು,
ಮೈ ನಡುಗುವುದು!



ಹಾ! ಹಾ! ನೋಡಿಲ್ಲಿ!
ನಾಟಕರಂಗದ ಪರದಾ ಹಿಂದೆ,
ಕಾಫಿಯ ಹೀರುತಲಿರುವನು ''ಹೀರೋ''!
ಪಾರ್ಟನು ಮಾಡಲು ಬಾಯಿಗೆ ಬರದೆ
ಕಣ್ಣನು ಅರಳಿಸಿ, ಬಾಯನು ತಿರುಗಿಸಿ,
ಯದ್ವಾತದ್ವಾ ಬೊಗಳುವನು!
'ಪ್ರಾಂಪ್ಟರ' ಮೇಲೆಯೆ ರೇಗುವನು,
ಬಲು ಪರದಾಡುವನು!



ಕಮಿಟಿಯ ರೂಮಲಿ ಆರ್ಭಟ ಕೇಳು!
ಕೆದರಿದ ಕೂದಲು, ಕೆಂಗಣ್ಣುಗಳು,
ಸೆಕ್ರೆಟರಿ ದೇವನು ಸಿಡಿಲಾಗಿರುವನು,
ಭೀಮನ ಸರಿಸದಲಿ!
ವೈರಿಯ ಎದೆಯನು
ಬಡಿಯುವ ಗದೆಯನು
ಮೇಲೆತ್ತಿರುವನು ನೋಡಲ್ಲಿ!
ಸೆಕ್ರೆಟರಿ ಬಿದ್ದನೆ!
ವೈರಿಯು ಎದ್ದನೆ!
ಮುಂದಾಗುವುದನು ಕಾಣಲ್ಲಿ:
ಇದಾವ ನ್ಯಾಯ?
ಏನನ್ಯಾಯ!



'ಕ್ಯಾನ್ವಾಸ್' ಕುಹಕವ ನೋಡಲ್ಲಿ!....
ಏನನು ನೋಡುವೆ?..... ತಡೆಯುವೆ ಏಕೆ?
ಸೆಕ್ರೆಟರಿ ರಾಯನು ಮಡಿಯಲೆ ಬೇಕು?
ಯುವಕನೆ! ತುಡು ಕಠಾರಿಯನು,
ಹೊಡೆ, ರಣಭೇರಿಯನು,
ತುಪ್ಪದ ದೋಸೆಯನು!



ನಡೆ, ನಡೆ, ಊದು-ತುತೂರಿಯನು,
ಕರೆ, ರಣ ಮಾರಿಯನು,
ಹೋಟಲು ‘ಮಾಣಿ’ ಯನು!
ಸೆಕ್ರೆಟರಿ ಗೆದ್ದನು!
ವೈರಿಯು ಬಿದ್ದನು!
ಹಿಡಿ, ಹಿಡಿ, ವಿಜಯಪತಾಕೆಯನು!
ಹೊಡೆ ಜಯಭೇರಿಯನು!!

ಬಡಾಯ ಬುಳ್ಳನು ಬುರುಡೆ ಹೊಡೆದರೆ,
ಭೂಮಿಯು ಗಡ ಗಡ ನಡುಗುವುದು!
ಹುಡುಗರ ಮೈಯಲಿ ರೋಮಾಂಚ,
ಮಿಂಚಿನಹೊಳೆ ತುಳುಕಾಡುವುದು!
ಮುದುಕರನೆಲ್ಲರ ಕುಣಿಸುವುದು,
ಮೈ ''ಜುಂ'' ಎನ್ನುವುದು,
ಎದೆ ''ಜಗ್'' ಎನ್ನುವುದು,
ಕಲಿ ಇಲಿಯಾಗುವನು,
ಕವಿ ಪೆಚ್ಚಾಗುವನು,
ರತಿ ನಲಿಯುವಳು,
ರಮೆ ಒಲಿಯುವಳು!!! ☺

ಜನವರಿ ಮೂವತ್ತು

○ ಕುಮುದಾ ಪುರುಷೋತ್ತಮ್

ಸ್ವಾತಂತ್ರ್ಯಕ್ಕೆ ಸ್ವಲ್ಪವೇ ಮುಂಚಿನ ವರ್ಷಗಳು. ನನಗಾಗ ಚಿಕ್ಕ ವಯಸ್ಸು. ಮನೆಯಲ್ಲೊಂದು ಗಾಂಧಿ ತಾತನ ಪಟವಿತ್ತು. ಆ ಫೋಟೋವಿನ ತಾತನೊಡನೆ ಎಂತಹ ನಿಕಟತೆ ಬಂದಿತ್ತೆಂದರೆ ಮನೆಯ ತಾತನನ್ನೂ ಎಷ್ಟೋಬಾರಿ ಗಾಂಧೀತಾತಾ ಎಂದು ಸಂಬೊಧಿಸಿ ಬಿಡುತ್ತಿದ್ದೆ! ಆದಿನಗಳಲ್ಲಿ ಸ್ವಾತಂತ್ರ್ಯ ಹೋರಾಟದ ಗಾಳಿ ನನಗೆ ತಟ್ಟಿದ್ದು ಒಂದು ಮುಂಜಾನೆ. ಹಾಸಿಗೆ ಬಿಟ್ಟು ಎದ್ದು ಬಂದವಳಿಗೆ ಮನೆಯನ್ನಾವರಿಸಿದ್ದ ಮೌನ ಬೆಪ್ಪು ಹಿಡಿಸಿತ್ತು. ಮನೆ ಮಂದಿ ಎಲ್ಲಾ ಉಗ್ರಾಣಕ್ಕೆ ಹೊಂದಿಕೊಂಡಿದ್ದ ಕೋಣೆಯನ್ನು ಸೇರಿದ್ದರು. ಅದು ನನ್ನ ದೊಡ್ಡಜ್ಜಿ ಮಲಗುತ್ತಿದ್ದ ಕೋಣೆ. ಮನೆಯವರೆಲ್ಲಾ ಅವರನ್ನು ಸಂಭೊಧಿಸುತ್ತಿದ್ದುದು 'ಅಕ್ಕಾ' ಎಂದು. ಅಳುತ್ತಿದ್ದ ಅವರನ್ನು ಒಬ್ಬೊಬ್ಬರೂ ಒಂದೊಂದು ರೀತಿ ಸಮಾಧಾನ ಮಾಡುತ್ತಿದ್ದರು.

''ಅಳ್ಬೇಡಿ ಅಕ್ಕ ನಿಮ್ಮಗ ಎಲ್ಲಿ ಹೋಗ್ತಾನೆ? ಖಂಡಿತಾ ವಾಪಸ್ಸು ಬಂದೇ ಬರ್ತಾನೆ.'' ಕೈ ಹಿಡಿದು ನನ್ನಜ್ಜಿ ಸಾಂತ್ವನ ನೀಡುತ್ತಿದ್ದರು. ನನ್ನ ಮನಸ್ಸಿನಲ್ಲಿ ನೂರಾರು ಪ್ರಶ್ನೆಗಳು ಉತ್ತರ ಹೇಳಲು ಯಾರಿಗೂ ವ್ಯವಧಾನವೇ ಇಲ್ಲ. ಹಿತ್ತಲಿಗೆ ಬಂದೆ. ಕೆಲಸದಾಳು ನಸರ ಭಾವಿಯು ಕಟ್ಟೆಮೇಲೆ ಬಿಸಿಲು ಕಾಯಿಸುತ್ತಾ ಕುಳಿತಿದ್ದವನು ಕೆಳಗಿಳಿದು ನನ್ನನ್ನು ಎತ್ತಿಕೊಂಡ.

''ಯಾಕೋ ನರಸ, ಎಲ್ಲಾ ಅಕ್ಕಾ ರೂಮಿನಲ್ಲಿದ್ದಾರೆ? ಪಾಪ ಅಕ್ಕ ತುಂಬಾ ಅಳ್ತಿದ್ದಾರೆ.'' ಮನೆಯ ಮುಂದಿನ ಸಂಪಿಗೆ ಮರದಡಿ ಕರೆದೊಯ್ದು ಕಿವಿಯಲ್ಲುಸುರಿದ. ''ಯಾರ್ಗೂ ಹೇಳ್ಬೇಡ ಕಣಮ್ಮಾ ನೆನ್ನೆ ರಾತ್ರಿ ಪೋಲೀಸ್ನೋರು ಕುಪ್ಪೂರಾಯ್ರನ್ನು ಹಿಡ್ಕೊಂಡು ಹೋದ್ರು. ಅದಕ್ಕೇ ಅವ್ರತಾಯಿ ಅಳ್ತಾ ಇದ್ದಾರೆ.''

''ಪೋಲಿಸ್ನೋರು ಕುಪ್ಪೂನ ಯಾಕೆ ಕರ್ಕೊಂಡು ಹೋದ್ರು? ಅವ್ನು ಕಳ್ತನ ಮಾಡಿದ್ನಾ?''

''ಹಾಗೆಲ್ಲಾ ಹೇಳ್ಬಾರ್ದು. ಬಿಡ್ತು ಅನ್ನು. ಕುಪ್ಪೂರಾಯರು ದೇಶಭಕ್ತರು ಗಾಂಧಿ ತಾತನ ಕಾಂಗ್ರೆಸ್ಸಿಗೆ ಸೇರಿ 'ಗಾಂಧೀ ಕಿ ಜೈ' ಅಂತ ಕೂಗ್ತಾ ಇದ್ರಂತೆ. ಅದಕ್ಕೆ ಬಂದು ಹಿಡ್ಕೊಂಡು ಹೋದ್ರು.'' ನನಗರ್ಥವಾಗುವಂತೆ ವಿಷಯವನ್ನು ಆದಷ್ಟು ಸರಳಗೊಳಿಸಿ ಹೇಳಿದ.

''ಗಾಂಧೀ ಕಾಂಗ್ರೆಸ್ ಅಂದ್ರೆ ಏನು?''

''ಅದೆಲ್ಲಾ ನಿನ್ಗೆ ಈಗ್ಲೇ ತಿಳ್ಯೋದಿಲ್ಲ. ದೊಡ್ಡೋವ್ಳಾದ ಮೇಲೆ ತಿಳಿಯುತ್ತೆ''

''ಗಾಂಧೀ ತಾತ ಕೆಟ್ಟೋರಾ? ಗಾಂಧೀ ಕಿ ಜೈ ಅಂತ ಹೇಳ್ಬಾರ್ದಾ?''

''ಗಾಂಧೀ ದೇವ್ರಂತ ಮನುಷ್ಯ ಕಣಮ್ಮ. ಪೋಲಿಸ್ನೋರೇ ಕೆಟ್ಟೋವ್ರು''

''ಹಾಗಾದ್ರೆ ನಂಗೊಂದು ಬಾವುಟ ಮಾಡಿ ಕೊಡ್ತೀಯಾ? ನಾನೂ ಗಾಂಧೀ ಕಿ ಜೈ ಅಂತ ಕೂಗಿ ಹೇಳ್ತೀನಿ.''

ನರಸ ಬಾಳೆ ಎಲೆಯನ್ನು ಅರ್ಧ ಸೀಳಿ ಒಂದರ್ಧದಲ್ಲಿ ತುಂಡು ಇರುವಂತೆ ಬಿಟ್ಟು ಮಿಕ್ಕುದನ್ನು ಹರಿದು ಬಾವುಟ ಮಾಡಿಕೊಟ್ಟ. ನಾನು ಮನೆಯ, ಅಕ್ಕ ಪಕ್ಕದ ಮಕ್ಕಳ ಜೊತೆ ಬಾವುಟ ಎತ್ತಿಹಿಡಿದು ಗಾಂಧೀ ಕಿ ಜೈ ಎಂದು ಉಚ್ಚ ಕಂಠದಲ್ಲಿ ಕೂಗುತ್ತಾ ಮನೆಯಲ್ಲಿ, ವಿಶಾಲವಾದ ಕಾಂಪೌಂಡಿನಲ್ಲಿ ಮೆರವಣಿಗೆ ನಡೆಸಿದೆ. ಮುಂದಿನ ಕೆಲವು ದಿನಗಳು ಆಟದ ಸಮಯದಲ್ಲೆಲ್ಲಾ ಈ ಪ್ರದರ್ಶನ ನಡೆದೇ ಇತ್ತು.

ಮತ್ತೊಂದು ದಿನ,

ಕುಪ್ಪು ಜೈಲಿನಿಂದ ಹಿಂತಿರುಗಿ ತಿಂಗಳುಗಳೇ ಆಗಿತ್ತು. ಒಂದು ದಿನ ಮನೆಯಲ್ಲಿ ಹಬ್ಬದ ವಾತಾವರಣ. ಮನೆಯ ಮುಖ್ಯ ದ್ವಾರಕ್ಕೆ ಬಾಳೆಕಂಬ, ಮಾವೆಲೆಯ ಅಲಂಕಾರ, ಮುಂದೆ ರಂಗೋಲಿಯ ಸಿಂಗಾರ, ಅಜ್ಜಿ ಹಬ್ಬದಡಿಗೆಯ ತಯಾರಿಯಲ್ಲಿದ್ದರು. ತಾತಾ ಖಾದಿ ಧರಿಸಿ ಗಾಂಧೀ ಟೋಪಿ ತೊಟ್ಟು ಮನೆಯ ಮಾಳಿಗೆಯ ಮೆಲೆ ರಾಷ್ಟ್ರಧ್ವಜ ಹಾರಿಸಿದರು. ಮನೆಯ ಮಕ್ಕಳೆಲ್ಲಾ ಅದಕ್ಕೆ ಸಲ್ಯೂಟ್ ಹೊಡೆದು ಭಾರತ್ ಮಾತಾಕಿ ಜೈ, ಮಹಾತ್ಮ ಗಾಂಧೀಕಿ ಜೈ, ಜೈಹಿಂದ್ ಎಂದು ಹುಯಿಲೆಬ್ಬಿಸಿದೆವು. (ತಾತ ಅಂದು ಗಾಂಧಿ ಟೋಪಿ ತೊಟ್ಟರೂ ಸ್ವಾತಂತ್ರ್ಯ ನಂತರದ ಕಾಲದಲ್ಲಿ ಈ ಟೋಪಿ ತೊಟ್ಟ ಇತರೇ ತಲೆಗಳು ಬೇರೆಯವರಿಗೆ ಟೋಪಿ ಹಾಕುವ ಕಾರ್ಯನೋಡಿ ತಮ್ಮ ಟೋಪಿ ತೆಗೆದು ಇಸ್ತ್ರಿ ಮಾಡಿ ಪೆಟ್ಟಿಗೆಯ ತಳದಲ್ಲಿ ಮಡಿಚಿಟ್ಟರು)

ಊಟಕ್ಕೆ ಕುಳಿತಾಗ ಅಜ್ಜಿಯನ್ನು ಕೇಳಿದೆನಂತೆ. ''ಇವತ್ತು ಏನು ಹಬ್ಬಾಮ್ಮಾ?''

''ಇವತ್ತು ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದಿದೆ. ನಮ್ಮನ್ನು ಆಳುತ್ತಿದ್ದ ಫರಂಗಿಯವರು ಇಲ್ಲಿಂದ ಹೊರಟಿದ್ದಾರೆ. ಅದಕ್ಕೇ ಹಬ್ಬ ಮಾಡುತ್ತಿದ್ದೇವೆ.'' ನನ್ನ ತಲೆಗೆ ಇದೆಲ್ಲಾ ಎಷ್ಟು ಅರ್ಥವಾಯಿತೋ ತಿಳಿಯದು. ಪಾಯಸವನ್ನಂತೂ ಲೊಟ್ಟೆ ಹೊಡೆದು ಮುಗಿಸಿದೆನಂತೆ.

ಮುಂದೊಂದು ಸಂಜೆ,

ಮನೆಯ ಹಿರಿಯರೆಲ್ಲಾ ವಿಶ್ರಾಂತಿ ಪಡೆಯುತ್ತಾ ಹಾಲಿನಲ್ಲಿ ಸೇರಿ ಅದೂ ಇದೂ ಮಾತು ನಡೆಸಿದ್ದರು. ಹಿನ್ನೆಲೆಯಲ್ಲಿ ರೇಡಿಯೋ ಇಂಪಾದ ಗಾಯನವನ್ನು ಹೊರಹಾಕುತ್ತಿತ್ತು. ನಾನು ನಮ್ಮಜ್ಜಿಯ ತೊಡೆ ಏರಿ ಕುಳಿತಿದ್ದ ನೆನಪು. ಸಂಗೀತ ಒಮ್ಮೆಗೇ ನಿಂತು ಯಾರೋ ಮಾತನಾಡತೊಡಗಿದರು. ಹಿರಿಯರು ಮಾತು ನಿಲ್ಲಿಸಿ ರೇಡಿಯೋ ಸುತ್ತ ನೆರೆದರು. ನನಗೇನೋ ಮುಜುಗರ. ಅಮ್ಮ ತನ್ನಷ್ಟಕ್ಕೆ ಅಳುತ್ತಿದ್ದರು. ಅಜ್ಜಿಯೂ ಸೀರೆಯ ಸೆರಗಿನಲ್ಲಿ ಕಣ್ಣೊರೆಸಿಕೊಂಡರು. ''ಯಾಕಜ್ಜೀ,

ಏನಾಯ್ತು?'' ನನ್ನ ಪ್ರಶ್ನೆಗೆ ಅವರಿಂದ ಉತ್ತರ ಬರಲಿಲ್ಲ. ತಾತ ತಮ್ಮ ಆರಾಮ ಕುರ್ಚಿಯಿಂದ ಮೇಲೆದ್ದು ತಮಗೆ ರಾತ್ರಿಯೂಟ ಬೇಡವೆಂದು ಹೇಳಿ ಮಲಗುವ ಕೋಣೆಗೆ ಹೋಗಿ ಬಾಗಿಲು ಹಾಕಿಕೊಂಡರು. ಎಷ್ಟೋ ಹೊತ್ತಿನ ನಂತರ ನನ್ನಜ್ಜಿ ಹೇಳಿದರು.

''ಗಾಂಧೀಜಿಯವರನ್ನು ಗುಂಡಿಟ್ಟು ಸಾಯಿಸಿದರಂತೆ.''

'ಗುಂಡು' ಎಂದರೇನೆಂದಾಗಲೀ 'ಸಾವು' ಎಂದರಾಗಲೀ ತಿಳಿಯದ ವಯಸ್ಸು. ಮನೆಯನ್ನು ಮುತ್ತಿದ ಶೋಕ ನನ್ನನ್ನು ವಿಚಿತ್ರ ರೀತಿಯಲ್ಲಿ ಆವರಿಸಿತು. ಹೊಟ್ಟೆಯಲ್ಲೇನೋ ತಳಮಳ, ಸಂಕಟ. ಏನೋ ಕ್ಷುಲ್ಲಕ ಕಾರಣ ಒಡ್ಡಿ ಅತ್ತು ರಚ್ಚೆ ಹಿಡಿದೆನಂತೆ. ಯಾರೆಷ್ಟು ರಮಿಸಿದರೂ ತೀರದ ಸಂಕಟ. ಊಟ ಬೇಡ, ಹಾಲೇ ಬೇಕೆಂಬ ಹಟ. ''ಇವತ್ತು ಹಾಲು ಕುಡಿಬಾರ್ದು. ಹಸಿವಾದ್ರೆ ಊಟಮಾಡು,'' ಅಮ್ಮ ಹೇಳುತ್ತಲೇ ಇದ್ದರು ಹಟ ಜಾಸ್ತಿಯಾಗಿ ಹಾಲಿನ ಜೊತೆ ಸಕ್ಕರೆಯೂ ಬೇಕೆಂದು ಹಟ ಹೆಚ್ಚು ಮಾಡಿದೆನಂತೆ. ಅಮ್ಮನಿಗೆ ಸಹನೆ ತಪ್ಪಿತು. ''ಬಾಪೂವನ್ನು ಗುಂಡಿಟ್ಟು ಕೊಂದಿರೋವಾಗ ಹಾಲು ಸಕ್ರೆ ಬೇಕೂಂತೀಯಾ'' ಎಂದು ಬಾರಿಸಲು ಕೈ ಎತ್ತಿದಾಗ ಮಿಕ್ಕವರು ತಡೆದರಂತೆ. ''ಪಾಪ ಮಗು, ಅದಕ್ಕೇನು ಗೊತ್ತಾಗುತ್ತೆ? ಮಕ್ಕಳು ದೇವರ ಸಮಾನ ಸಕ್ರೆ ಹಾಕಿ ಕೊಡು.'' ಕೊನೆಗೆ ಸಕ್ಕರೆ ಹಾಕಿದ ಹಾಲನ್ನು ಕುಡಿದು ಹೊಟ್ಟೆ ತೊಳಸಿ ಎಲ್ಲಾ ಹೊರಹಾಕಿ ಮಲಗಿದೆನಂತೆ.

ಮರು ಮುಂಜಾನೆ ಡಾಕ್ಟರು ತಾತನನ್ನು ನೋಡಲು ಬಂದಿದ್ದರು. ''ನೆನ್ನೆಯ ಘಟನೆಯನ್ನು ಬಹಳ ಹಚ್ಚಿಕೊಂಡು ಬ್ಲಡ್‌ಪ್ರೆಷರ್ ಜಾಸ್ತಿಯಾಗಿದೆ. ಮಾತ್ರೆ ಬರ್‍ಕೊಡತೀನಿ ತಿಂದು ವಿಶ್ರಾಂತಿ ತಗೊಳ್ಳಿ'' ಎಂದು ಹೊರಟರು. ಅವರು ನಮ್ಮ ಕುಟುಂಬದ ಡಾಕ್ಟರು. ನನಗವರ ಬಳಿ ಸಲಿಗೆ. ಹೊರಬಂದಾಗ ಅವರ ಸೈಕಲ್ ಬಳಿ ಕಾದು ನಿಂತಿದ್ದೆ. ಅವರನ್ನು ಭೇಟಿಯಾದಾಗಲೆಲ್ಲಾ ಕೈ ಮೇಲೆತ್ತಿ 'ಜೈಹಿಂದ್' ಹೇಳಿ ವಂದಿಸುತ್ತಿದ್ದ ಅಭ್ಯಾಸ ನನಗೆ. ಇಂದೂ ಹಾಗೆಯೇ ಮಾಡಿ ಜೊತೆಗೆ ಗಾಂಧೀಜಿ ಕಿ ಜೈ ಎಂದು ಬಿಕ್ಕಳಿಸಿದೆ. ಮನೆಯ ಹಿರಿಯರು ಹಿಂದಿನ ರಾತ್ರಿ ನಾ ಮಾಡಿದ ವಿವರಣೆ ಇತ್ತರು. ''ಆ ಗಾಂಧೀ ಮಹಾತ್ಮ ಈ ದೇಶದ ಪ್ರತಿಯೊಂದು ವ್ಯಕ್ತಿಯ ಮೇಲೆಯೂ, ಅಷ್ಟೇಕೆ ಒಂದು ಮಗುವಿನ ಮೇಲೆಯೂ ಎಂತಹ ಭಾವನಾತ್ಮಕ ಬೆಸುಗೆ ಹಾಕಿದ್ದಾನೆ ನೋಡಿ. ಅಂತಹ ಧೀಮಂತನನ್ನು ಉಳಿಸಿಕೊಳ್ಳಲು ನಾವು ಕೇಳಿಬರಲಿಲ್ಲ'' ಅವರೂ ಕರ್ಚೀಫನ್ನು ಕಣ್ಣಿಗೊತ್ತಿಕೊಳ್ಳುತ್ತಾ ಸೈಕಲ್ ಏರಿದರಂತೆ.

ಪ್ರತಿ ಜನವರಿ ಮೂವತ್ತರಂದು ಆ ದಿನದ ನೆನಪು ಕಾಡುತ್ತದೆ. ಮತ್ತೆ ಮಗುವಾಗಿ ನಾ ಕಾಣದಿದ್ದ ಆ ತಾತನನ್ನು ನೆನೆದು ಕಣ್ಣು ತೇವವಾಗುತ್ತದೆ.

- ಬಸ್ಸಾಯಣ-

○ ಅರುಣಾ ಕಾರಂತ

ಮುಂಜಾನೆ ಏಳುತ್ಲೆ ಆ ದಿನದ ಪೇಪರ್ ಕೈಗೆತ್ಕೊಂಡಾಗ ರಿಟೈರ್ಡ್ ಬ್ಯಾಂಕ್ ಮ್ಯಾನೇಜರ್ ಭೀಷ್ಮಾಚಾರ್ಯರಿಗೆ ಕಣ್ಣಿಗೆ ಬಿದ್ದದು ಬಸ್ ಓಡಿಸಲಿಕ್ಕೆ ಲೈಸೆನ್ಸ್ ಕೊಡುವ ಪದ್ಧತಿ ಸರಳೀಕೃತ ಅನ್ನೋ ಸುದ್ದಿ. ರಾಯರು ಒಮ್ಮೆಲೆ 'ಅಯ್ಯೋ ಮುಟ್ಠಾಳ' ಅಂತ ನಕ್ಕರು. ಪುಗಸಟ್ಟೆ ಪೇಪರ್ ಗಿರಾಕಿ ಪಕ್ಕದ್ಮನೆ ಶ್ಯಾಮಾಚಾರ್‌ರು ಒಳಕಾಲಿಡುತ್ತಿದ್ದಂತೆಯೇ 'ಏನ್ ರಾಯರೇ ಬೆಳಿಗ್ಗೆ ಬೆಳಿಗ್ಗೆ ಮಂಗಳಾರತಿ ಮಾಡತಾ ಇದ್ದೀರಿ ಪೇಪರ್ ನೋಡೋಣ ಅಂತ ಬಂದ್ರೆ' ಎಂದರು. ರಾಯರು ಗಂಭೀರವಾಗಿ 'ನಿಮಗ್ಯಾಕ್ರೀ ಮುಟ್ಠಾಳ ಅನ್ಲೀ? ನೋಡಿ ಈ ಪೇಪರ್ ನೋಡಿ, ಹೋಗಿ ಹೋಗಿ ಬಸ್ಸು ಓಡಿಸಲು ಲೈಸನ್ಸ್ ಕೊಡುವ ಪದ್ಧತಿ ಸರಳಗೊಳಿಸಿದ್ದಾರಂತೆ, ಏನಿದೆ ಅಂತ ಮಾಡ್ತಾರೋ. ನಮ್ಮಲ್ಲೆ ಒಬ್ಬ ಇದ್ದ. ಬಸ್ಸು ಓಡ್ಸಿದ್ದ''.

''ಅಲ್ಲ, ರಾಯ್ರೇ, ಇದಕ್ಕಿಂತ ಇನ್ನೇನ್ ಮಾಡ್ಬೇಕೂಂತೀರಿ ತಾವು? ಎಲ್ಲಾ ತುಟ್ಟಿ, ಮನುಷ್ಯರೇ ಮನುಷ್ಯರನ್ನು ತಿಂಡ್ಕೊಂಡ್ ಬದ್‌ಕೂ ಕಾಲ ಬಂದ್ಬಿಟ್ಟಿದೆ. ರಾಮ, ರಾಮ ಎಂಥಾ ಕಾಲ ಬಂದ್ಬಿಟ್ಟಿದೆ?'' ಅಂದ್ರು ಶ್ಯಾಮರಾಯರು.

''ಶ್ಯಾಮರಾಯರೇ ಯಾಕ್ ಅಷ್ಟು ನಿರಾಶರಾಗ್ತೀರಿ ಕಾಲ ಏನೂ ಕೆಟ್ಟೋಗಿಲ್ಲ ಇದ್ದಾಗೆ ಇದೆ. ವ್ಯತ್ಯಾಸ ಇರೋದು ಒಂದೆ, ಯಾವುದು ಮೊದಲು ಡೇಟ್-ಬಾರ್ ಆಗಿತ್ತೋ ಅದು ಈಗ ಆದರ್ಶ ಆಗಿದೆ. ಮೊದಲು ದಿವಾನಗಿರಿಗೆ ಅರ್ಜಿ ಹಾಕ್ಕೊಂತಿದ್ದವರು, ಈಗ ಜವಾನಗಿರಿಗೆ ಅರ್ಜಿ ಹಾಕ್ತಾ ಇದ್ದಾರೆ, ದಾಸರೇ ಹೇಳಿಲ್ಲವಾ 'ದಾಸನ ಮಾಡಿಕೊ ಎನ್ನ' ಬಂಟನಾಗಿ ಬಾಗಿಲ ಕಾಯ್ವೆ ಅದರಲ್ಲೂ ಬ್ಯಾಂಕಿನ ಜವಾನಗಿರಿ ಸಿಕ್ಕರಂತೂ ಸ್ವರ್ಗಕ್ಕೆ ಮೂರೆ ಗೇಣು, ನೀನ್ಯಾಕೊ ನಿನ್ನ ಅಂಗ್ಯಾಕೊ ಅಂತೀನಿ ಈಗ ಅದೂ ಸುಲಭದಲ್ಲಿ ಸಿಗೂ ಉದ್ಯೋಗ ಅಲ್ಲ. ಬಿ.ಎ., ಎಮ್.ಎ., ಆದವ್ರೂ ಅದಕ್ಕ ಅರ್ಜಿ ಹಾಕ್ತಾರ ಯಾಕಂದ್ರ ಅದ್ರಾಗೊಂದು ಫಾಯಿದೆ ಐತಿ. ಕಡಿಮೆ ಕೆಲಸ, ಹೆಚ್ಚು ಸಂಬಳ ಅದೂ ಮನೆ ಹತ್ರ ಯಾರಿಗೆ ಬ್ಯಾಡಾಗಿದೆ?

ಇದಕ್ಕುದಾರಣೆಯಾಗಿ ನನ್ನ ಅಂಡರ್ ಕೆಲ್ಸ ಮಾಡಿದವನ ಕಥೆ ಹೇಳ್ತೀನಿ ಕೇಳ್ರಿ, ಅವನ ಹೆಸ್ರ ಬೇಡ ಇಲ್ಲಿ ಅವನ ಹೆಸ್ರ 'ಎಕ್ಸ್' ಅಂತ ಇಟ್ಕೊಳ್ಳಿ ನಾನಾಗ ಸಾಗರದಾಚೆ ಹೊಳೆಬಾಗಿಲಲ್ಲಿ ಇದ್ದೆ. ಅಲ್ಲಿ ಈ ಮನುಷ್ಯ ಆ ಬ್ರಾಂಚಿನಲ್ಲಿ ಅಟೆಂಡರ್ ಆಗಿದ್ದ. ಸ್ಥಳೀಕ, ಊರಲ್ಲಿ ಎಲ್ಲರ್ದು ಪರಿಚಯ, ಯಾವತ್ತೂ ಬ್ರಾಂಚಿಗೆ ಟ್ರಿಮ್ಮಾಗೆ ಬರ್ತಿದ್ದ.

ನಾನ್ಹೋದ ಸ್ವಲ್ಪದರಲ್ಲಿಯೇ ಅವನ ವ್ಯವಹಾರದ ವಿಸ್ತಾರ ಸ್ವಲ್ಪ ಸ್ವಲ್ಪವಾಗಿ ತಿಳಿಯುತ್ತಾ ಬಂದಿತು ಅವ ಬ್ಯಾಂಕಿಗೆ ಬರೋದು ಹೋಗೋದು ಎಲ್ಲಾ ಸ್ವಲ್ಪ ಸ್ವಲ್ಪ ಅಸ್ತವ್ಯಸ್ತ ಆಗಿತ್ತು. ಆದ್ರ ಎಲ್ರ ಜತೆ ಚೆನ್ನಾಗಿ ನಗುನಗುತ್ತ ಇದ್ದ, ಅಂತ ಯಾರೂ ಏನೂ ಹೇಳ್ಲಿಲ್ಲ. ಕಡೇಗೊಮ್ಮೆ..., ಒಮ್ಮೆ, ನಾನು ಸಾಗರಕ್ಕೆ ಹೋಗ್ಬೇಕಂತ

ಮನೆಯಿಂದ ಬಸ್‌ಸ್ಟಾಂಡಿಗೆ ಹೊರಟಿದ್ದೆ. ಹೊಸದಾಗಿ ಒಂದು ಬಸ್ ಬಂದು ನಿಂತಿತು. ಒಳಗಡೆ ನಮ್ಮ ಅಟೆಂಡರ್ ಆಸಾಮಿ, 'ಬನ್ನಿ ಸರ್, ಬನ್ನಿ ಸರ್' ಅಂತ ಕರೆದ. ನಾನು ಒಂದು ಸಲ ಸುಮ್ಮನೆ 'ಏನಪ್ಪಾ ನಿನ್ನ ಅವತಾರ ಇದು' ಎಂದೆ. 'ಎಲ್ಲಾ ನಿಮ್ಮ ದಯೆ ಸಾರ್' ಎಂದ. ಬಸ್ಸಿನ ಡ್ರೈವರ್, ಕ್ಲೀನರ್ ಯಾರಿಗೋ ಈ ಆಸಾಮಿಯೇ ಬಸ್ಸಿನ ಸಾವುಕಾರ್‍ರು ಅಂತ ಪರಿಚಯ ಮಾಡ್ತಿರೋದು ಕಣ್ಣಿಗೆ ಬಿತ್ತು.

ಇವ ಬೆಳಿಗ್ಗೆ ಆರು ಘಂಟೆಗೆ ಎದ್ದು ಮುಖಕ್ಕಿಷ್ಟು ನೀರ್ ಕಾಣ್ಸಿ ಬಸ್‌ಸ್ಟಾಂಡಿಗೆ ಓಡಿ ಡ್ರೈವರ್, ಕಂಡಕ್ಟರ್‌ಗಳನ್ನು ಎಬ್ಬಿ ಟಿಕೆಟ್ ಬುಕ್ ಮಾಡಿ 'ರ್‍ಯಾಟ್' ಅಂತ ಹೇಳಿದ್ಮೇಲೆನೆ ಮನೆಗ್ಬರೋದು. ಮನೆಗ್ಬಂದವನೆ ಬಟ್ಟೆ ಹಾಕ್ಕೊಂಡು ಬ್ಯಾಂಕಿಗೆ (ಹೊಳೆಬಾಗಿಲಿಗೆ) ಬಂದ್ರ ಅಲ್ಲಿ ಅವ್ನ ಬಸ್ಸು ವಾಪಸ್ಸು ಹೋಗ್ಲಿಕ್ಕೆ ತಯಾರಾಗಿರ್ತದೆ. ಅಲ್ಲಿ ಗೇಟ್ ಪಾಸ್ ಚೆಕ್ ಮಾಡಿ ಸೈನ್ ಹಾಕಿ ಮತ್ತೊಮ್ಮೆ 'ರೈಟ್' ಅಂತ ಕಳ್ಸಿದ ಮೇಲೆ ಇವ್ನ ಬ್ಯಾಂಕ್ ಉದ್ಯೋಗ ಆರಂಭ. ಮಧ್ಯಾಹ್ನ ಬಿಸಿ ಬಿಸಿ ಅಡಿಗೆ ಮಾಡಿ ಹೆಂಡತಿ ಬಸ್ಸಿನಲ್ಲಿ ಊಟ ಕಳಿಸ್ತಿದ್ಲು, ಊಟ ತಿಂಡಿಗೂ ಆಸಾಮಿಗೆ 'ಟೈಮ್' ಸಿಗ್ತಿರಲಿಲ್ಲ ಪಾಪ! ಕೆಲವು ದಿವ್ಸ ಹೀಗೆ ಚೆನ್ನಾಗೇ ನಡೀತಿತ್ತು ಇವನಲ್ಲೂ ಸ್ವಲ್ಪ 'ಅಹಂ' ಛಾಯೆ ಕಾಣಿಸ್ಲಿಕತ್ತಿತು. 'ನೀನ್ಯಾಕೋ ನಿನ್ನ ಹಂಗ್ಯಾಕೋ' ಅನ್ನುವ ರೀತಿ ಇವನ ನಡತೆಯಲ್ಲಿ ಕಾಣುತ್ತಿತ್ತು. ಹೊರಗೆಲ್ಲಾ ಇವನು 'ಸಾವುಕಾರ್‍ರು' ಅನ್ನಿಸಿಕೊಂಡು, ಬ್ಯಾಂಕಿನ ಒಳಗಡೆ ಜವಾನ ಅನ್ನಿಸಿಕೊಳ್ಳಲಿಕ್ಕೆ ಕಿರಿಕಿರಿ ಅನ್ನಿಸ್ತಿತ್ತು. ನಾನೇನಾದ್ರೂ ಹೇಳಿದ್ರೆ, 'ಯಾರಿಗ್ಬೇಕಾಗೈತ್ರಿ ಇವ್ರ ನೌಕ್ರಿ' ಅನ್ನೂ ತರಹ ಬೇರೆಯವ್ರ ಹತ್ರ ಮಾತಾಡ್ಕೊಳ್ತಿರೋದು ಗಮನಕ್ಕೆ ಬಂದಿತು. ನಾನೂ ಸುಮ್ನೆ ಇದ್ದೆ. ಇವನ್ದು ದರ್ಬಾರು ಏನ್ ಕೇಳ್ತೀರಿ? ದಿವ್ಸ ಒಂದೂವರೆ ಎರಡ್ಸಾವಿರ ಬಸ್ಸಿನ ಕಲೆಕ್ಷನ್ನು ಇವ್ನ ಕೈಗೆ ಬರ್ತಿತ್ತು. ಗಾಡಿಯ ಕಲೆಕ್ಷನ್ನೂ ಚೆನ್ನಾಗಿಗೇ ಇತ್ತು. ಗಾಡಿನೂ ಓಡ್ತಿತ್ತು, ಆದ್ರೆ ಕಾಲ ಇದ್ದಾಗೆ ಇರೋಲ್ಲ ನೋಡಿ. ಹೊಸ್ದಾಗಿ ಗಾಡಿ ಆರಂಭಿಸಿದಾಗ ದಾರಿಯಲ್ಲಿರೋ ನೂರೆಂಟು ಭೂತಪ್ಪನ ಕಟ್ಟೆಗಳಿಗೂ ಪ್ರತಿ ಅಮಾವಾಸೆಗೊಮ್ಮೆ ಕಾಯಿ ಒಡ್ಸಿದ್ದೆಲ್ಲಾ ಸರಿ, ಆದ್ರವು 'ಬಲಿ' ಬೇಡ್ತಿದ್ದವ್ರೂಂತ ಕಾಣ್ತದೆ. ಇದ್ದಕ್ಕಿದ್ದ ಹಾಗೆ ಚಿಕ್ಕಪುಟ್ಟ ಆಕ್ಸಿಡೆಂಟುಗಳು ಗಾಡಿ ರಿಪೇರಿ, ಒಂದರಹಿಂದೊಂದು ಬರಲಿಕ್ಹತ್ತಿದ್ವು. ಈಗ ಹೆಚ್ಚು ಕಡಿಮೆ ಅವನ ಬ್ಯಾಂಕ್ ಉದ್ಯೋಗ ಪಾರ್ಟ್ ಟೈಮ್' ಆಗಲಿಕ್ಕೆ ಹತ್ತಿತು.

ನಾನೂ ಒಳಗಿಂದೊಳಗೆ ಲೆಕ್ಕ ಹಾಕಿದೆ ಬ್ಯಾಂಕಿನಲ್ಲಿ ಸಾಲ ಎಲ್ಲ ಮಾಡಿದ್ರೂ ಬಸ್ಸು ಕೊಳ್ಳುವಷ್ಟು ಇವನ ಹತ್ತಿರ ದುಡ್ಡೆಲ್ಲಿಂದ ಬಂತು ಅಂತ ಯೋಚನೆ ಮಾಡ್ಲಿಕ್ಹತ್ತಿದೆ. ಬ್ಯಾಂಕಿನಲ್ಲಿ ಎಲ್ಲಾ ಸಾಲ ಮಾಡಿದ್ರೂ ಅಬ್ಬಬ್ಬಾ ಅಂದ್ರೂ ಒಂದೈವತ್ತು ಸಾವಿರ ಸಿಕ್ಕೀತು..... ಇನ್ನು.....ಮ್ಯಾಲಿಂದೂ.....ನನಗ ಮುಂದಕ್ಕೆ ತಲೆ ಓಡಲಿಲ್ಲ.


ಇಷ್ಟೊತ್ತಿಗೆ ಇವನ ಈ ವ್ಯವಹಾರದ ವಿಷಯ ಹೇಗೋ ಮೇಲಧಿಕಾರಿಗಳ ಗಮನಕ್ಕೆ ಬಂದು ನಿನ್ನ ಹೊಳೆಬಾಗಿಲ ಸಾಗರ ಸರ್ವಿಸು ಸಧ್ಯ ಸಾಕು ಸ್ವಲ್ಪ ಬೇವಿನ ಕಡ್ಡಿ, ಜೋಳದ ರೊಟ್ಟಿ ಕಡ್ದ ಬಾ ಅಂತ ಬಿಜಾಪುರಕ್ಕ ಅವನ್ನ ವರ್ಗ ಮಾಡಿದರು

ಇವಾದ ಮೇಲೆ ನಮ್ಮ ಜವಾನ ಮಹಾಶಯನ ಬಣ್ಣ ಒಂದೊಂದೇ ಹೊರಬೀಳಲಿಕ್ಕತ್ತಿತು, ದಿನ ಬೆಳಗೂ ಒಬ್ಬೊಬ್ಬರೇ ಬಂದು ನಿಮ್ಮ ಜವಾನ ಎಲ್ರೀ ಕಾಣೂದಿಲ್ಲ ಅವನಿಗೆ ಟ್ರಾನ್ಸಫರ್ ಆಗ್ಯೆತಂತಲ್ಲ ಒಳ್ಳೆ ಕೈಕೊಟ್ಟು ಹೋದ್ನಲ್ಲ ಆಸಾಮಿ, ಅಂತ ಹೇಳ್ಲಿಕ್ಕೆ ಬರ್ಲಿಕ್ಹತ್ತಿದ್ರು ನನಗ 500 ಕೊಡ್ಬೇಕು, 1000 ಕೊಡ್ಬೇಕು, 5000 ಕೊಡ್ಬೇಕು, 50000 ಕೊಡ್ಬೇಕು ಅಂತ ಹೇಳ್ಳಿಕ್ಹತ್ತಿದಾಗ ಅವ್ನ ವ್ಯವಹಾರದ ಚಿತ್ರ ಸ್ಪಷ್ಟ ಆಗ್ತಾ ಬಂತು.


ನನ್ನ ಪರಿಚಯದ ಬಸ್ ಮಾಲೀಕ್ರು ಶೆಟ್ರ ಹತ್ರ ಏನ್ ಹಕೀತತ್ತು ಈ ಬಸ್ ವ್ಯವಹಾರದ್ದು ಅಂತ ಕೇಳಿದಾಗ, 'ಅಯ್ಯೋ ಅದರಲ್ಲೇನದ್ರಿ ವಿಶೇಷ! ಎಲ್ಲಾ ಮಾಡೋದು ಇದನ್ನ! ನಾವೆಲ್ಲಾ ಹತ್ತತ್ತು ಬಸ್ಸಿಟ್ಟು ಬಸ್ಸಿನ ದಂಧೇನ ಬ್ಯಾಡಂತ ಬಿಟ್ಟಾಯ್ತು. ಬಸ್ಸು ಅಂದ್ರೇನಂತ ಮಾಡೀರಿ, ಸಾಕ್ಷಾತ್ ಲಕ್ಷ್ಮೀ, ಲಕ್ಷ್ಮೀ ಇದ್ದ್ಹಾಂಗ, ಚಂಚಲ ಶುದ್ಧ ಚಂಚಲ! ನಿಯತ್ ಇದ್ರ ಸರಿ ಇಲ್ಲಾಂದ್ರ ತಿರುಗಿ ಬಿತ್ತು. ಈ ದಂದೆಯೊಳಗ ಎಲ್ಲಾ ಕಾಲಕ್ಕ ಎಲ್ಲಿ ನಿಯತಿನಿಂದ ಇರಲಿಕ್ಕಾಗ್ತದ ಹೇಳಿ? ಆಗೆಲ್ಲ ಧಿಡೀರ್ ಸಾವುಕಾರ್ರು ಅನ್ನೋಕೀಬೇಕನ್ನೋ ಚಪಲ ಬಕ್ರಾಗಳು ಸಿಗ್ತಾವೆ. ನಾವು ಒಂದರ್ಧ ಹಣ ತಕ್ಕೊಂಡು ಬಸ್ಸು ಬಿಟ್ಕೊಡ್ತಿವಿ. ದಿವ್ಸ ಕಲೆಕ್ಷನ್ನಲ್ಲಿ ಇಂತಿಷ್ಟು ಹಣ ಕೊಡ್ಬೇಕು ಪೂರ್ತಿ ಹಣ ಬಂದ್ಮೇಲೆ ಬಸ್ಸನ್ನು ಪಾರ್ಟಿ ಹೆಸ್ರಿಗೆ ಮಾಡ್ಕೊಡೋದು ಅಂತ ಬರ್‍ಸಿಕೊಳ್ಳುತ್ತೇವೆ. ಇವ್ರೋ ಮುಳ್ಳುಗಳು. ಬಸ್ಸಿನ ದಂಧೆ ಏನಂತ ಗೊತ್ತಿರೋದಿಲ್ಲ. ಕೊಡೊವ್ರಿಗೆ ಕೊಟ್ಕೊಂಡು ಕೆಲಸದವರನ್ನ, ಜನರನ್ನ, ಬಸ್ಸನ್ನ ನಿಯತ್ನಾಗಿಟ್ಕೊಂಡರೆ ಬಸ್ಸು ನಡೀತದೆ, ಇವ್ರಿಗೆ ಕಲೆಕ್ಷನ್ ದುಡ್ಡು ಕೈಗೆ ಬಂದಾಕ್ಷಣ ನಿಯತ್ತು ವ್ಯವಹಾರ ಎಲ್ಲಾ ಮರ್‍ತು ಬಿಡ್ತಾರೆ. ತಿಂದು ಕುಡ್ದು ಮಜಾ ಮಾಡಿ ಮತ್ತೆ ಮೂರೆ ದಿವ್ಸಕ್ಕೆ ಬಸ್ಸಿಗೆ ಡೀಸೆಲ್ ತುಂಬ್ಲಿಕ್ಕೆ ಬೇರೆಯವ್ರ ಹತ್ರ ಸಾಲ ಮಾಡ್ತಾರೆ, ಕೊನಿಗೆ ಇವ್ರ ಸಾಲ ತೀರ್‍ಸಲಿಕ್ಕೆ ಮತ್ತೊಬ್ರ, ಅವ್ರದಕ್ಕೆ ಇನ್ನೊಬ್ರ ಹತ್ರ, ಇಲ್ಲೂ ಸಾಲ, ಅಲ್ಲೂ ಸಾಲ ಮಾಡಿ ಬಸ್ಸು ಕೊಟ್ಟವ್ರಿಗೆ ಬಾಕಿ ಕೊಡ್ಲಿಕ್ಕಾಗ್ದೆ ಕೊಟ್ಟವ್ರು ಬಸ್ಸು ವಾಪಸ್ಸು ತಗೊಂಡ್ಹೋಗ್ತಾರೆ. ಇವ್ರು ನಡುಬೀದಿಲ್ನಿಲ್ತಾರೆ. ಬಸ್ಸು ನಡೀತಿರುವಾಗ ಕೇಳಿದೋರೆಲ್ಲಾ ಸಾಲ ಕೊಟ್ಟವರು ಬಸ್ಸು ನಡೆಯದಿರುವಾಗ ಹುಚ್ಚು ನಾಯಿನ್ನ ಬೆನ್ನ ಹತ್ತಿದ್ಹಾಗೆ ಬೆನ್ನಹತ್ತತಾರೆ, ಆಗ ಇವ್ರ ಹತ್ರ ಕೊಡ್ಲಿಕ್ಕೆನಿರ್ತದ? ಅಂತ ಹೇಳಿ ಸುಮ್ನಾದ್ರು ನಮ್ ಆಟೆಂಡರ್ ಆಸಾಮಿ ಯಾರಿಗೇನ್ ಕುಡ್ಸಿ ಹಾಳ್ ಮಾಡೂ ಮಗ ಅಲ್ಲ, ಪುಗ್ಸಟ್ಟೆ ಕುಡ್ದಾನ್ಯೇ ಹೊರ್ತು! ನೀವ್ ಏನೆ ಹೇಳಿ ಅವ ರೊಕ್ಕ ಎಲ್ಲೋ ಇಟ್ಟಿದ್ದಾನೆ. ಎಂದು ಹೇಳಿ ಸುಮ್ಮನಾದೆ. ಇದನ್ನ ಕೇಳಿ ಶ್ಯಾಮರಾಯರು ನಿಮ್ಮ ಬಸ್ಸಾಯಣ ರಾಮಾಯಣಕ್ಕಿಂತ ಬಲ ಇರ್ತಾರ್ರಿ ಈ ಜಗತ್ತಿನೊಳಗ ಇಂಥಾ ಜನಾನೂ ಇರ್ತಾರೆ, 'ಎಲ್ಲಾ ಬಿಟ್ಟು ಮಗ ಭಂಗಿ ನೆಟ್ಟ' ಅಂತ ಹೇಳ್ತಾರೆ ಬೇಡಪ್ಪಾ ಸಾಕು ಅನ್ನಿಸಿದ್ದ ದಂಧೆನ ಅದ್ರಲ್ಲೇನೋ ಇದೆ ಅಂತ ಕೈಹಿಡಿದು ಎತ್ಕೊತಾರಲ್ಲ ಏನ್ ಹೇಳ್ಬೇಕು ಇವ್ರಿಗೆ?! ಎಂದು ಕೈಯಲ್ಲಿದ್ದ ಪತ್ರಿಕೆಯನ್ನು ಇಸ್ಸುಕೊಂಡು ನಡ್ದೇಬಿಟ್ಟರು.

ಹೊಸ ಟ್ರಾಫಿಕ್ ಚಿಹ್ನೆಗಳು


ಟ್ರಾಫಿಕ್ ಚಿಹ್ನೆ ಅಂದರೆ ಗೊತ್ತು ತಾನೆ. 'ರೋಡ್ ಸೈನ್'ಗಳು ರೀ. Halt & Proceed Main Road Ahead ಅಂತೆಲ್ಲಾ ಇರುತ್ತಲ್ಲ ಅದೇ. ಈಗ ಬೆಂಗಳೂರಿನ ಟ್ರಾಫಿಕ್ ಪರಿಸ್ಥಿತಿ ನೋಡಿದರೆ, ಹೊಸ ಚಿಹ್ನೆಗಳು ಅತ್ಯಂತ ಜರೂರು ಅನ್ನಿಸುತ್ತದೆ. ನಮ್ಮ ವಾಹನ ಸಂಚಾರ ಇಲಾಖೆಯ ಅವಗಾಹನೆಗಾಗಿ ಕೆಳಗಿನ ಹಲವು ಸಲಹೆಗಳನ್ನು ಮಾಡಲಾಗಿದೆ.




ಈ ಚಿಹ್ನೆ ಬಹು ಸರಳವಾಗಿ ಆ ರಸ್ತೆಯಲ್ಲಿ ನಿಮಗೊದಗಬಹುದಾದ ಗಂಡಾಂತರವನ್ನು ಸೂಚಿಸುತ್ತದೆ. ಪಾಟ್ ಹೋಲ್ ಚಿಹ್ನೆಯನ್ನು ನೋಡಿದ ತಕ್ಷಣ ಚಾಲಕ ಹುಷಾರಾಗಿಬಿಡಬಹುದು.




ಇದಕ್ಕೆ ವಿವರಣೆ ಬೇಕಾಗಿಲ್ಲ. ರಸ್ತೆ ತುಂಬಾ ನಂದಗೋಕುಲದ ಮಕ್ಕಳಂತೆ ಪಾಟ್ ಹೋಲ್‌ಗಳು ಕಂಗೊಳಿಸುತ್ತಿವೆ ಎಂದು ತಿಳಿದ ಚಾಲಕ, ಆ ರಸ್ತೆಯನ್ನೇ ಬಿಟ್ಟು ಬೇರೆ ದಾರಿ ಹುಡುಕಬಹುದು.



''ಕಾಗದ ಹಾಕಿ ಬಂದೆಯಾ ತಾನೆ?'' ಎಂದು ಇದರರ್ಥ. ಶೂರರೂ, ಧೀರರೂ ಚಾಲನೆ ನಡೆಸುವ ರಸ್ತೆಗಳಿವು.




''ಗೀತಾ/ಖುರಾನ್/ಬೈಬಲ್ ಪಠಣ ಮಾಡಿ ಈ ರಸ್ತೆಗೆ ಕಾಲಿಡಿ'' ಎಂದು ಭಕ್ತಿಯಿಂದ ಸೂಚಿಸುವ ಈ ಚಿಹ್ನೆ ಚಾಲಕರ ಪಾರಮಾರ್ಥಿಕ ಸುಖವನ್ನೂ ಗಮನದಲ್ಲಿಟ್ಟುಕೊಂಡಿರುವುದು ಶ್ಲಾಘನೀಯ




ರಸ್ತೆ ರಿಪೇರಿ ಕೆಲಸ ಪ್ರಾರಂಭವಾಗಿ ಎಷ್ಟು ಕಾಲವಾಯಿತು ಎಂಬುದನ್ನು ಬಹು ಸೂಚ್ಯವಾಗಿ ತಿಳಿಸುವ ಚಿಹ್ನೆ ಇದು. ಹಳದೀ ಬೋರ್ಡಿನ ಮೇಲೆ ಕಪ್ಪು ಬಣ್ಣ ಮೂಡಿದರೆ ಚನ್ನ.

ಜಂಬಲ್‌ಗೆ ಸರಿಯುತ್ತರ:-

ಬಿಸಿಲುಗುದುರೆ, ಗುಂಡು ಹಾಕುವುದು, ಪುಳಿಯೋಗರ್ರೆ, - ರೈಲು ಬಿಡುವುದು.


ಕೋಟಿ ಕೋಟಿ ಗ್ರಾಹಕರ ಸಂತಸವೇ ನಮ್ಮ ಸ್ಫೂರ್ತಿ
ಕೆನರಾ ಬ್ಯಾಂಕ್
(ಭಾರತ ಸರ್ಕಾರದ ಉದ್ಯಮ)
ಪ್ರಧಾನ ಕಚೇರಿ, ಜೆ.ಸಿ. ರಸ್ತೆ, ಬೆಂಗಳೂರು-560 002.



Printed by V.R. NATH for the Publisher M. SHIVAKUMAR, Published and owned by M. SHIVA KUMAR, 36, 6th Main Road, Malleswaram, Bangalore-560 003. Printed at IMPRESSIONS, 404, Sampige Road, Malleswaram, Bangalore-560 003. Editor : M. SHIVAKUMAR.